4. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಭೂ-ಕಂದಾಯ (ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, 2007ರ ಕರ್ನಾಟಕ ಭೂ-ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಭೂ-ಕಂದಾಯ (ತಿದ್ದುಪಡಿ) ವಿಧೇಯಕ, 2007, ತಿದ್ದುಪಡಿ Bill ಸಂಖ್ಯೆ 28, ಈಗಾಗಲೇ ಇದನ್ನು ಸರ್ಕಾರ ಮಂಡನೆ ಮಾಡಿದೆ ಮತ್ತು ತಾವು ಇವತ್ತು ಪರ್ಯಾಲೋಚನೆಗೆ ತೆಗೆದುಕೊಂಡಿದ್ದೀರಿ. ಮೊನ್ನೆ ಈ Bill ಅನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಮಾನ್ಯ ಶಾಸಕರುಗಳು ಇದರಲ್ಲಿದ್ದಂಥ ಕೆಲವು clauses ಬಗ್ಗೆ ತಮ್ಮ ತಕರಾರುಗಳನ್ನೆತ್ತಿದ್ದರು. ಮಂಡನೆ ಮಾಡುವ ಹಂತದಲ್ಲಿಯೇ ಅದನ್ನು ವಿರೋಧ ಮಾಡಿದರು. ಹೀಗಾಗಿ ಕೆಲವು ತಿದ್ದುಪಡಿಗಳೊಂದಿಗೆ ನಾನು ಈ ವಿಧೇಯಕವನ್ನು ಮಂಡನೆ ಮಾಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿದ್ದೆ. ಕೆಲವೊಂದು ತಿದ್ದುಪಡಿಗಳನ್ನು ಅಳವಡಿಕೆ ಮಾಡಿಕೊಂಡು ಈ ಕರ್ನಾಟಕ ಭೂ ಕಂದಾಯ Bill ಅನ್ನು ನಾನು ಸದನದಲ್ಲಿ ಮಂಡಿಸುತ್ತಿದ್ದೇನೆ. ಈ ಮಸೂದೆಯನ್ನು ಮಂಡಿಸಲಿಕ್ಕೆ ಮೂಲ ಕಾರಣವೇನೆಂದರೆ, ಸರ್ಕಾರಿ ಭೂಮಿಯನ್ನು ಯಾರು ಒತ್ತುವರಿ ಮಾಡಿಕೊಂಡಿದ್ದಾರೆ, ಆ ಒತ್ತುವರಿಯನ್ನು ತೆರವು ಮಾಡಿಸುವುದು ಒಂದು ಭಾಗ. ಆ ಒತ್ತುವರಿಯನ್ನು ಮಾಡಿದಂಥ ವ್ಯಕ್ತಿಗಳ ಮೇಲೆ ಯಾವುದೇ ಶಿಕ್ಷೆ ನೀಡುವಂಥದ್ದು ಇರಲಿಲ್ಲ. Karnataka Land Revenue Act ಪ್ರಕಾರ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡವರ ಮೇಲೆ eviction ಮಾಡುವಂಥದ್ದು, ತೆರವು ಮಾಡಿಸುವಂಥ ಅಧಿಕಾರ ನಮ್ಮ ಅಧಿಕಾರಿಗಳಿಗೆ ಇದೆ. ಆದರೆ, ಅದು ಎಷ್ಟೊಂದು ಕ್ರಿಯಾಶೀಲವಾಗಬೇಕಿತ್ತೋ ಅದು ಆಗಲಿಲ್ಲವೆನ್ನುವುದು ಇನ್ನೊಂದು ಕಡೆ ಇದೆ. ಹೀಗಾಗಿ ಸರ್ಕಾರಿ ಭೂಮಿಯ ಒತ್ತುವರಿ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಾ ಬಂತು. ಅದಕ್ಕೊಂದು ನಿಯಂತ್ರಣ

ಹೇರಬೇಕು ಮತ್ತು ಯಾರು ಈ ರೀತಿ ಒತ್ತುವರಿ ಮಾಡುವ ವ್ಯಕ್ತಿಗಳಿದ್ದಾರೆ, ಅಂಥ ವ್ಯಕ್ತಿಗಳ ಮೇಲೆ ಒಂದು ಕಾನೂನಿನ ಶಿಕ್ಷೆ ಇರಬೇಕೆನ್ನುವ ಮೂಲ ಉದ್ದೇಶವನ್ನಿಟ್ಟುಕೊಂಡು ಈ ವಿಧೇಯಕವನ್ನು ನಾವು ಮಂಡನೆ ಮಾಡಿದ್ದೇವೆ. ಅದರಲ್ಲಿ ಈ ಭೂಮಿಯನ್ನು ಒತ್ತುವರಿ ಮಾಡಿಕೊಂಡಂಥ ವ್ಯಕ್ತಿಗಳು ಯಾವ ರೀತಿ ಇದ್ದಾರೆಂದರೆ, ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದಷ್ಟಲ್ಲದೆ, ಇವತ್ತೇನು land records ಇರುತ್ತವೆ, ಆ land records ನಲ್ಲಿ ಸಹಿತ "ಸರ್ಕಾರಿ" ಎನ್ನುವ ಹೆಸರನ್ನು ತೆಗೆದುಹಾಕಿ ಸರ್ಕಾರದ ಕೆಲವೊಂದು ಅಧಿಕಾರಿಗಳ ಸಹಕಾರದೊಂದಿಗೆ ಆ ಹೆಸರುಗಳನ್ನು ಸಹಿತ ಬದಲಾವಣೆ ಮಾಡುವಂಥ ಪ್ರಕರಣಗಳು ನಮ್ಮ ಗಮನಕ್ಕೆ ಬಂದವು. ಹೀಗಾಗಿ ಯಾರು ಈ ಸರ್ಕಾರಿ ಭೂಮಿ ಒತ್ತುವರಿ ಮಾಡುವವರಿದ್ದಾರೆ, ಅಂಥ ವ್ಯಕ್ತಿಗಳ ಮೇಲೆ ಜೈಲು ವಾಸದ ಶಿಕ್ಷೆಯನ್ನು ಕೊಡಬೇಕೆನ್ನುವ ಉದ್ದೇಶ ಇಟ್ಟುಕೊಂಡು ಮತ್ತು ಅವರಿಗೆ penalty ಹಾಕಬೇಕೆನ್ನುವ ಉದ್ದೇಶ ಇಟ್ಟುಕೊಂಡು ಸದರಿ ವಿಧೇಯಕವನ್ನು ಸದನದ ಮುಂದೆ ತೆಗೆದುಕೊಂಡು ಬಂದಿದ್ದೇವೆ. ಈಗಾಗಲೇ ಸುಗ್ರೀವಾಜ್ಞೆ ಮುಖಾಂತರ ಇದನ್ನು ಅನುಷ್ಠಾನಕ್ಕೆ ಸಹ ತೆಗೆದುಕೊಂಡು ಬಂದಿದ್ದೇವೆ. ಆ ಮಸೂದೆಯಲ್ಲಿ ಪ್ರಮುಖವಾಗಿ ಬೆಂಗಳೂರು ನಗರದ ಸುತ್ತಮುತ್ತ ಇದ್ದಂಥ ಪ್ರದೇಶಗಳಲ್ಲಿ 18,000 ಎಕರೆಗಳಷ್ಟು ಜಮೀನು ಒತ್ತುವರಿಯಾಗಿದ್ದು ಈಗಾಗಲೇ ಕಂಡುಬಂದಿದೆ. ಮಾನ್ಯ ಶಾಸಕರಾದ ಎ.ಟಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿ ಈಗಾಗಲೇ ನೇಮಕವಾಗಿದೆ. ಮಾನ್ಯ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿನ ಆ ಸದನ ಸಮಿತಿ ಮತ್ತು ಎಲ್ಲ ಪಕ್ಷದ ಸದಸ್ಯರು ಈಗಾಗಲೇ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿದ್ದಂಥ ಎಲ್ಲ ಜಮೀನುಗಳ ಬಗ್ಗೆ ಸಮೀಕ್ಷೆಯನ್ನು ಮಾಡಿದ್ದಾರೆ. ಅದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ, ಮಾಹಿತಿಯನ್ನು collect ಮಾಡಿಕೊಂಡಿದ್ದಾರೆ. ಈ ಎಲ್ಲ ಮಾಹಿತಿಗಳನ್ನು ತೆಗೆದುಕೊಂಡು ಈಗಾಗಲೇ ಒಂದು ಮಧ್ಯಂತರ ವರದಿ ಸಹಿತ ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿಯನ್ನು ನಾವು ನೋಡಿದಾಗ ಎಷ್ಟೊಂದು ರೀತಿಯಲ್ಲಿ ಸರ್ಕಾರದ ಜಮೀನು ಒತ್ತುವರಿಯಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. 18,000 ಎಕರೆಯಷ್ಟು ಜಮೀನು ಕೇವಲ ಬೆಂಗಳೂರು ನಗರ ಸುತ್ತಮುತ್ತ ಒತ್ತುವರಿಯಾಗಿದೆ ಎಂದು ಆ ವರದಿಯಿಂದ ನಮಗೆ ತಿಳಿದುಬರುತ್ತದೆ. ಹೀಗಾಗಿ ಒಂದು ಕಡೆ ಒತ್ತುವರಿ ಇರುವುದನ್ನು identify ಮಾಡುವುದು, ನಂತರ ಆ ಒತ್ತುವರಿಯನ್ನು ತೆರವುಗೊಳಿಸಿ ಅದನ್ನು ಸರ್ಕಾರದ ಕಬ್ಜಾಕ್ಕೆ ತೆಗೆದುಕೊಳ್ಳುವುದು,

ಯಾರು ಒತ್ತುವರಿ ಮಾಡಿದ್ದಾರೆ ಅವರ ಮೇಲೆ criminal case ಅನ್ನು ಹಾಕುವುದು, ಇವೆಲ್ಲವನ್ನು ನಾವು ಮಾಡಬೇಕಾಗಿದೆ. ಹೀಗಾಗಿ ಕಾನೂನಿನ ಒಂದು ಶಕ್ತಿ ನಮಗೆ ಬೇಕಾಗಿದೆ. ಆ ದೃಷ್ಟಿಕೋನದಿಂದ ಈ ಒಂದು clause ಅನ್ನು ಹಾಕಿ ಈ ಕಾನೂನನ್ನು ತಂದಿದ್ದೇವೆ. ಅದರ ಜೊತೆಗೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಮಾಡುವಾಗ ಅದಕ್ಕೆ conversion certificate ಅನ್ನು ತೆಗೆದುಕೊಳ್ಳುವುದಿಲ್ಲ, conversion fee ತುಂಬುವುದಿಲ್ಲ, ಯಾವುದೇ development charges ತುಂಬುವುದಿಲ್ಲ, ಸಂಬಂಧಪಟ್ಟ ಪ್ರಾಧಿಕಾರದಿಂದ ಅವರ ಒಪ್ಪಿಗೆಯನ್ನು ತೆಗೆದುಕೊಳ್ಳದೇ, ಆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶದ ಸಲುವಾಗಿ ಉಪಯೋಗ ಮಾಡಿಕೊಳ್ಳುವಂಥ ಸಾಕಷ್ಟು ಪ್ರಕರಣಗಳು ಕಂಡುಬಂದಿವೆ. ಹೀಗಾಗಿ, ಅಂಥ ಪ್ರಕರಣಗಳಲ್ಲಿ ಸಹಿತ ಯಾರು ಆ ರೀತಿ ಕಾನೂನು ಬಾಹಿರವಾಗಿ, ನಿಯಮ ಬಾಹಿರವಾಗಿ ಈ ರೀತಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಉಪಯೋಗ ಮಾಡುತ್ತಾರೆ, ಅಂಥವರಿಗೆ ಸಹ ಜೈಲುವಾಸ, punishment ಮತ್ತು penalty ಬಗ್ಗೆ ಸಹ ತಂದಿರುವ clause ನಲ್ಲಿ ಸೇರಿಸಿದ್ದೇವೆ. ಹೀಗಾಗಿ ಇಂಥ clause ಗಳನ್ನು ಇದರಲ್ಲಿ ಸೇರಿಸಿದ್ದೇವೆ. ಹಾಗೆಯೇ last time ಏನು objection ಮಾಡಿದ್ದಾರೆ, ಅವುಗಳ ಬಗ್ಗೆ ಆ clause ನಲ್ಲಿ exclude ಮಾಡುವಂಥದ್ದನ್ನೆಲ್ಲ ಈ ವಿಧೇಯಕದಲ್ಲಿ ಸೇರಿಸಿದ್ದೇವೆ. ಹಾಗೆಯೇ, ಈಗಾಗಲೇ ಸುಗ್ರೀವಾಜ್ಞೆ ಮುಖಾಂತರ ಸಾಕಷ್ಟು ಜನರ ಮೇಲೆ criminal cases ಅನ್ನು ಹಾಕುವಂಥದ್ದು ಮತ್ತು ಕೆಲವೊಮ್ಮೆ arrest ಮಾಡುವಂಥದ್ದು ಈಗಾಗಲೇ ಆಗಿದೆ. ಹೀಗಾಗಿ, ಈ ಸುಗ್ರೀವಾಜ್ಞೆ ಬಂದಮೇಲೆ ಸಾಕಷ್ಟು ಜನರಿಗೆ ಈ ಕಾನೂನಿನ ಹೆದರಿಕೆ ಉಂಟಾಗಿದೆ ಎನ್ನುವುದನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಈ ರೀತಿ ಒಂದು ಕಾನೂನು ತರುವುದರ ಮೂಲಕ ದಿಟ್ಟವಾದ ಕ್ರಮವನ್ನು ಸರ್ಕಾರ ಕೈಗೊಂಡಿದೆ. ಈ ರೀತಿ ಸರ್ಕಾರಿ ಜಮೀನನ್ನು ಯಾರು ಒತ್ತುವರಿ ಮಾಡಿದ್ದಾರೆ, ಅವರ ಮೇಲೆ ಕಾನೂನು ಕ್ರಮದ ಮೂಲಕ 1 ವರ್ಷದಿಂದ 3 ವರ್ಷಗಳವರೆಗೆ ಜೈಲು ಶಿಕ್ಷೆ. ಈ ವಿಧೇಯಕದಲ್ಲಿ ಇದೆ. ಈ ರೀತಿಯಾದ ಕಾನೂನು ಈ ಹಿಂದೆ ಯಾವತ್ತೂ ಇರಲಿಲ್ಲ. ಇಂಥ ಕಾನೂನನ್ನು ಇವತ್ತು ಸದನದ ಮುಂದೆ ಮಂಡನೆ ಮಾಡಿದ್ದೇವೆ. ಅದಕ್ಕಾಗಿ ನಾನೇನು ಹೇಳುತ್ತಿದ್ದೇನೆಂದರೆ, ಇದು ಬಹಳ ಮಹತ್ವದ ವಿಧೇಯಕವಾಗಿದೆ. ಇದಕ್ಕೆ ದಯವಿಟ್ಟು ಎಲ್ಲ ಪಕ್ಷದವರು ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಮತ್ತು

ಮಾನ್ಯ ಸದಸ್ಯರು ಇನ್ನೇನು ಸಲಹೆ ಸೂಚನೆಗಳನ್ನು ಕೊಡುತ್ತಾರೆ ಅದರ ಮೇಲೆ ನಾನು ಮತ್ತೆ ಉತ್ತರವನ್ನು ಕೊಡುತ್ತೇನೆ. ದಯವಿಟ್ಟು ಈ ಒಂದು ವಿಧೇಯಕವನ್ನು pass ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

5–30 ಗಂಟೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್) :– ಇವತ್ತು ಜಗದೀಶ್ ಶೆಟ್ಟರ್‌ರವರು ಮಂಡಿಸಿ, ಈ ಭೂ ಕಂದಾಯ ಅಧಿನಿಯಮ 1964ಕ್ಕೇನು ತಿದ್ದುಪಡಿ ತಂದಿದ್ದಾರೆ, ಈ ತಿದ್ದುಪಡಿಯ ಕೆಲವು ಭಾಗಗಳನ್ನು ನಾವು ಸ್ವಾಗತ ಮಾಡತಕ್ಕಂಥದ್ದಿದ್ದರೂ ಕೂಡ ಅನೇಕ ವಿಷಯಗಳು ಇವತ್ತು ಸಾಮಾನ್ಯ ಜನರಿಗೆ ತೊಂದರೆಯಾಗತಕ್ಕಂಥ ರೀತಿಯಲ್ಲಿವೆ. ಇದರಲ್ಲಿ ಎರಡು ಪ್ರಶ್ನೆಗಳಿವೆ. ಪಟ್ಟಣ ಪ್ರದೇಶಗಳಲ್ಲಿರುವ ಜನ ಭೂ ಕಬಳಿಕೆ ಮಾಡಿ ಸರ್ಕಾರಿ ಜಮೀನುಗಳನ್ನು ಹೊಡೆದುಕೊಂಡು ಅದನ್ನು ಸೈಟ್ ಮಾಡಿ ಮಾರತಕ್ಕಂಥದ್ದು ಮತ್ತು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡತಕ್ಕಂಥವರಿಗೆ ನೀವು ಶಿಕ್ಷೆ ಕೊಡತಕ್ಕಂಥದ್ದು ಒಂದು ಕಡೆ. ಆದರೆ, ಹಳ್ಳಿಗಳಲ್ಲಿ ಅನೇಕ ಬಡ ಜನ ಲಕ್ಷಾಂತರ ಎಕರೆ ಜಮೀನುಗಳನ್ನು unauthorized cultivation ಮಾಡಿದ್ದಾರೆ. ಹಿಂದಿನ ಸರ್ಕಾರ, ನಾವೇ ಇದ್ದಾಗ Section (a), (b), (c) ಗೆ amendment ತಂದು regularize ಮಾಡತಕ್ಕಂಥದ್ದು ಅಲ್ಲದೆ ಅದಕ್ಕೆ committee ಕೂಡ ಮಾಡಿ, ಶಾಸಕರೇ ಅದಕ್ಕೆ ಅದರ ಅಧ್ಯಕ್ಷರಾಗಿ ಬಡವರ applications ತೆಗೆದುಕೊಂಡು ಯಾರು ನಿಜವಾಗಿಯೂ ಅದನ್ನು cultivate ಮಾಡುತ್ತಿದ್ದಾರೆ, ಅವರಿಗೆ ಅಕ್ರಮ ಸಕ್ರಮದಲ್ಲಿ ಜಮೀನನ್ನು ಸಕ್ರಮಗೊಳಿಸತಕ್ಕಂಥದ್ದನ್ನು ನಾವು ಮಾಡಿದ್ದೇವೆ. ಅದು ನಿಮಗೂ ಕೂಡ ಗೊತ್ತಿದೆ. ಇವತ್ತು ಕೂಡ ಅದು ಜಾರಿಯಲ್ಲಿದೆ. ಈಗ ಈ ಕಾನೂನಿನ ಪ್ರಕಾರ ಅವರ ಸ್ಥಿತಿ ಏನು? ಏಕೆಂದರೆ, ಅವರೆಲ್ಲರೂ ಕೂಡ ಬಡವರು ಇವತ್ತು ಅಕ್ರಮವಾಗಿಯೇ ಜಮೀನುಗಳನ್ನು ಮಾಡುತ್ತಿದ್ದಾರೆ. ಎಲ್ಲಿಯವರೆಗೆ ನೀವು ಅವರಿಗೆ ಪಟ್ಟಾ ಕೊಡುವುದಿಲ್ಲ ಅಥವಾ confirm ಮಾಡುವುದಿಲ್ಲ ಅಲ್ಲಿಯವರೆಗೆ ಅದು unauthorized cultivation. Unauthorized cultivation ಎಂದು ಹೇಳಿದ ಮೇಲೆ ಇವತ್ತೇನು ಸಾವಿರಾರು ರೈತರು, ಕೃಷಿ ಕಾರ್ಮಿಕರು, ಬಡವರು 1, 2 ಎಕರೆ, ಅರ್ಧ ಎಕರೆ ಹೀಗೆ ಮಾಡಿಕೊಂಡು ಬರುತ್ತಿದ್ದಾರೆ, ಅವರ ಗತಿ ಏನು? ಮತ್ತು ಅವರನ್ನು ಹೆದರಿಸುವುದು, ಅವರನ್ನು exploit ಮಾಡತಕ್ಕಂಥದ್ದು ಅಥವಾ ದುಡ್ಡು ವಸೂಲಿ ಮಾಡುವ ಕೆಲಸವೂ ಕೂಡ ಕೆಳ ಮಟ್ಟದಲ್ಲಿ ನಡೆಯುತ್ತದೆ. ಏಕೆಂದರೆ, ಯಾರೂ

ಅಪ್ಪಿತಪ್ಪಿ application ಹಾಕಲಿಲ್ಲ ಅಥವಾ ಅವರ ಅಣ್ಣ-ತಮ್ಮಂದಿರಲ್ಲೇ ಜಗಳ ಬಂದು ಅನೇಕ ಸಾರಿ 3-4 applications ಹಾಕತಕ್ಕಂಥದ್ದಿದೆ. ಅದರ ಬಗ್ಗೆ ನೀವು ಗಂಭೀರವಾಗಿ ಆಲೋಚನೆ ಮಾಡಿದ್ದೀರೋ, ಹೇಗೆ? ಮಾಡಿದ್ದರೆ, ಅದು ಎಷ್ಟು ಎಕರೆ ಇದೆ, ಎಷ್ಟು ಜನರಿದ್ದಾರೆ, ಎಷ್ಟು applicants ಇದ್ದಾರೆ, ಇದರಲ್ಲಿ ಅವರನ್ನು ಹೊರತುಪಡಿಸಿದ್ದೀರೋ, ಇಲ್ಲವೋ? ಇಲ್ಲ. ಕೂರ್ಗ್‌ನಲ್ಲಿರುವ ಕಾಣೆ, ಬಾಣೆ, ಜಮ್ಮ ಇಂಥ ಭೂಮಿಗಳಿಗೆ ಅದನ್ನು ಅಕ್ರಮವಾಗಿ ಮಾಡಿಕೊಂಡರೂ ಕೂಡ ಸಕ್ರಮಗೊಳಿಸಿಕೊಂಡು ಅಂಥದ್ದನ್ನು ಹೊರತುಪಡಿಸಿ ಬೇರೆ ಎಲ್ಲದಕ್ಕೂ ಕೂಡ ಲಾಗೂ ಇದೆ. ಅಂದರೆ, ಕೂರ್ಗ್‌ಗೆ ಸಂಬಂಧಪಟ್ಟಂತೆ ನೀವು ಒಂದು exemption ಕೊಟ್ಟಿದ್ದೀರಿ. ಉಳಿದ ಕಡೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- 94 (a), (b), (c).....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಥವಾ ಅಧಿನಿಯಮದ 94 (a), (b), (c) ಪ್ರಕರಣಗಳಡಿಯಲ್ಲಿ ರಚಿಸಲಾದ ಸಮಿತಿ, ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಇದು ಇದ್ದರೆ ಪರವಾಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅದು amend ಆಗಬೇಕು. ಮುಂದೆ ಅರ್ಜಿ ಇರುವವರಿಗೆ ಅನ್ಯಾಯವಾಗಕೂಡದೆಂದು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ :- Cases pending ಇವೆ.

ಶ್ರೀ ಎಂ.ಪಿ. ಕುಮಾರಸ್ವಾಮಿ :- ಅರ್ಜಿ ಕೊಟ್ಟಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ನಿಮ್ಮ ಅಭಿಪ್ರಾಯವೇನಿದೆ ಎಂಬುದನ್ನು ಆಮೇಲೆ ಹೇಳಿ. ಏಕೆ ಅವಸರ ಮಾಡುತ್ತೀರಿ?

ಉಪಾಧ್ಯಕ್ಷರು :- ಕುಮಾರಸ್ವಾಮಿಯವರೆ, ಅವರು ಮಾತನಾಡಿ ಇನ್ನೂ ಮುಗಿಸಿಲ್ಲ. ನೀವು ಆಮೇಲೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾನೇಕೆ express ಮಾಡುತ್ತಿದ್ದೇನೆಂದರೆ, ಕೆಲವು ಸಲ ಇದರಡಿಯಲ್ಲಿ ಇಂಥ ಕಾನೂನಿದೆ ಎಂದು ಹೇಳಿ ಜಬರ್‌ದಸ್ತ್‌ನಿಂದ ಬಡವರ ಜಮೀನುಗಳನ್ನು ತೆಗೆದುಕೊಳ್ಳತಕ್ಕಂಥದ್ದು

ಅಥವಾ ಅವರಿಂದ ದುಡ್ಡು ವಸೂಲಿ ಮಾಡುವಂಥ ಕೆಲಸವನ್ನು Revenue Inspector ಮಟ್ಟದಲ್ಲಾಗಲಿ, Village Accountant ಮಟ್ಟದಲ್ಲಾಗಲಿ, ತಹಶೀಲ್ದಾರ್ ಮಟ್ಟದಲ್ಲಾಗಲಿ ಆಗಬಾರದು. ಏಕೆಂದರೆ, ಇದಕ್ಕಾಗಿಯೇ ಅನೇಕ ಪಕ್ಷಗಳು ಹೋರಾಟ ಮಾಡಿವೆ. ಇದನ್ನು regularization ಮಾಡಬೇಕೆಂದು ಲಕ್ಷಾಂತರ ಜನರು ಜೈಲಿಗೆ ಹೋಗಿ ಬಂದಿದ್ದಾರೆ. ಅದಕ್ಕಾಗಿ, ಇವತ್ತು ಪಟ್ಟಣ ಪ್ರದೇಶಗಳಲ್ಲಿ ಕೂಡ ಕೆಲವು ಕಡೆ ಏನಾಗಿದೆಯೆಂದರೆ, ಅಲ್ಲೊಂದು limit ಇತ್ತು. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿಗೆ ಕನಿಷ್ಠ ನಮ್ಮ Corporation border ನಿಂದ 5, 7, 18 ಕಿ.ಮೀ exemption ಇತ್ತು. ಗುಲ್ಬರ್ಗಾಕ್ಕೆ ಒಂದು limit, city Municipalities ಗೊಂದು limit ಇತ್ತು. ಈಗ ಏನಾಗಿದೆ ಎಂದರೆ, ಅನೇಕ unauthorized cultivation ನಲ್ಲಿ ಬಂದಂಥ ಭೂಮಿ ಇವತ್ತು city limit ನಲ್ಲಿ ಕೆಲವು ಕಡೆ ಬಂದಿವೆ. ಅವು city limit ನಲ್ಲಿ ಬಂದಾಗ ಸಹಜವಾಗಿ ಭೂ ಕಬಳಿಕೆಯಾಗಿದೆ ಎಂದು ಹೇಳಿ ಆ ಬಡವನನ್ನು ಇದರಲ್ಲಿ ಸೇರಿಸಿದರೆ ನಾಳೆ ಶಿವಮೊಗ್ಗ, ಮೈಸೂರು, ಗುಲ್ಬರ್ಗಾ ಇರಬಹುದು, ಇಂಥ ಅನೇಕ ಕಡೆ 10–15 ವರ್ಷಗಳ ಹಿಂದೆ ಅಥವಾ 1991 ರ ಹಿಂದೆ ಏನು ಪರಿಸ್ಥಿತಿ ಇತ್ತೆಂದರೆ ಆಗ ಇಷ್ಟೊಂದು ಬೆಲೆ ಇರಲಿಲ್ಲ. ಅಥವಾ market rate ಇರಲಿಲ್ಲ, ಸರ್ಕಾರಿ ಜಮೀನುಗಳನ್ನು ತೆಗೆದುಕೊಂಡ ಮಾರುವವರು ಇರಲಿಲ್ಲ. ಇತ್ತೀಚೆಗೆ ಯಾವಾಗ ಭೂಮಿ ಬೆಲೆ ಹೆಚ್ಚಿಗೆ ಆಗಿದೆ, ಆಗ ಕಬಳಿಸುವಂಥದ್ದು, false record create ಮಾಡುವುದು ಪ್ರಾರಂಭವಾಗಿದೆ. ಇವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ, ಗುಲ್ಬರ್ಗಾದಲ್ಲಿ ಒಂದು ಪ್ರಕರಣ ಗಮನಿಸಿದೆ, Health Department ನ DHO office ನಲ್ಲಿಯೇ ಇದು ನನ್ನ ಜಮೀನು ಆಗಿದೆ ಎಂದು ಉರ್ದು ಭಾಷೆಯಲ್ಲಿ ಒಂದು record create ಮಾಡಿ ಈರುಳ್ಳಿ seal ಹೊಡೆದಿದ್ದಾರೆ. ಅದು ಗೊತ್ತೇ ಆಗುವುದಿಲ್ಲ. ಅದನ್ನು ಯಾರು verify ಮಾಡುತ್ತಾರೆ? ಮಸಿಯನ್ನು ಸ್ವಲ್ಪ ಜಾಸ್ತಿ ಹಚ್ಚುವುದು. So that, ಅದು ಗೊತ್ತಾಗಬಾರದೆಂದು ಆ ರೀತಿ ಮಾಡುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ :– ಈರುಳ್ಳಿಯ ಸೀಲ್ ಒತ್ತುವುದನ್ನು ನಾವು ಎಲ್ಲಿಯೂ ಕೇಳಿಲ್ಲ ನಿಮಗೆ ಹೇಗೆ ಇದು ಅನುಭವಕ್ಕೆ ಬಂತು?

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ :– ಬೀದರ್‌ನ famous Urdu University ಮಹಮದ್ ಗವಾನ್ ಇದೆಯಲ್ಲ, ಈರುಳ್ಳಿಯ false seal

ಮಾಡಿಯೇ ಮಹಮದ್ ಗವಾನ್‌ರವರನ್ನು ಸೂಲಿ ಮೇಲೆ ಏರಿಸಿದ್ದು. ಇವತ್ತು ಭೂಮಿ ಕಬಳಿಕೆ ಎದ್ದಿದೆ. ಅದಕ್ಕಾಗಿ, ಮಹಮದ್ ಗವಾನ್‌ಗೆ ಈರುಳ್ಳಿಯ ಸೀಲ್ ಹೊಡೆದು ಇಡೀ ಜನರು ಅವರನ್ನು ಸೂಲಿಗೇರಿಸಬೇಕೆಂಬ ನಿರ್ಣಯ ತೆಗೆದುಕೊಂಡಿದ್ದೇವೆಂದು ಹೇಳಿ ಇನ್ನೊಬ್ಬ ಅವರ ಪ್ರಧಾನಿ order ತಂದು execute ಮಾಡಿಬಿಟ್ಟ. ಇದು ಜಮೀನು ಅದಕ್ಕೆ ಇಂಥ ಬಹಳಷ್ಟಿವೆ. ಅದಕ್ಕಾಗಿ ಅಂಥವರಿಗೆ ಶಿಕ್ಷೆ ಕೊಡುವುದಕ್ಕೆ ಜೈಲಿಗೆ ಹಾಕುವುದಕ್ಕೆ ನೀವೇನಾದರೂ ಮಾಡಿ. ನಾವು ಬೆಂಬಲ ನೀಡುತ್ತೇವೆ. ಈಗ forest ನಲ್ಲಿ ಅನೇಕ ಲಂಬಾಣಿ ಜನರು ಉಳಿದುಕೊಂಡವರಿದ್ದಾರೆ ಅಥವಾ ಪರಿಶಿಷ್ಟ ಜಾತಿ:ಪಂಗಡದವರಿದ್ದಾರೆ. agri-culture labour ಇದ್ದಾರೆ. ಶಿವಮೊಗ್ಗದಲ್ಲಿಯಂತೂ ಮನೆಗಳು, ಗುಡಿಸಿಲುಗಳನ್ನು ಕಟ್ಟುವುದಕ್ಕೆ ಸರ್ಕಾರಿ ಜಮೀನುಗಳನ್ನೇ ಉಪಯೋಗ ಮಾಡಿಕೊಂಡಿದ್ದಾರೆ. ಅದಕ್ಕೆಲ್ಲ ನೀವು ಕಬಳಿಕೆ ಲೆಕ್ಕದಲ್ಲೇ ತೆಗೆದುಕೊಂಡರೆ, ಅದು ಕೂಡ ತೊಂದರೆಯಾಗುತ್ತದೆ. ಅದಕ್ಕೆ, ಇದೆಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ನಿಮ್ಮ ಎ.ಟಿ. ರಾಮಸ್ವಾಮಿಯವರ report ಅನ್ನು in toto implement ಮಾಡುವುದಕ್ಕೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರೋ, ತೆಗೆದುಕೊಳ್ಳಿ, ಆದರೆ, ಅದರ ಹೆಸರಿನಲ್ಲಿ ಬಡವರಿಗೆ ಅನ್ಯಾಯವಾಗಬಾರದು. ಬಡವರ ಭೂಮಿ ಅವರ ಕೈಯಿಂದ ತಪ್ಪಿಹೋಗಬಾರದು ಮತ್ತು ಅವರಿಗೆ ತೊಂದರೆಯಾಗಬಾರದು. ಆ ದಿಕ್ಕಿನಲ್ಲಿ ಇದನ್ನು ನೋಡಬೇಕು. ಇಲ್ಲವೆಂದರೆ, ನಾಳೆ ಸ್ಥಳದಲ್ಲಿರುವ ಪುಢಾರಿಗಳು, ಮುಖಂಡರು, vested interested class ಅವರೆಲ್ಲರನ್ನೂ ಓಡಿಸುತ್ತಾರೆ. ಆಮೇಲೆ, ಅದನ್ನು ಅವರೇ ಕಬ್ಜಾ ಮಾಡಿಕೊಂಡುಬಿಡುತ್ತಾರೆ. ನೇರವಾಗಿ application ಕೊಟ್ಟು ಹಿಂದಿನ Date ಹಾಕಿಕೊಂಡು, ಸೇರಿಸಿಕೊಂಡು ಆಮೇಲೆ regularize ಮಾಡಿಕೊಳ್ಳುತ್ತಾರೆ. ಅದಕ್ಕೆ ಇದೆಲ್ಲವನ್ನೂ ಕೂಡ ನೀವು ಗಮನದಲ್ಲಿಟ್ಟು ಕೊಳ್ಳಬೇಕಾಗುವುದು ಬಹಳ ಮುಖ್ಯ. ಕೇವಲ ಬೆಂಗಳೂರು, ಮೈಸೂರು ದೃಷ್ಟಿಕೋನದಲ್ಲಿಟ್ಟುಕೊಂಡು ಅಥವಾ ನಿಮ್ಮ ತಲೆಯಲ್ಲಿ ಯಾರ‍್ಯಾರಿದ್ದಾರೆ ಅವರ ಬಗ್ಗೆಯೇ ಚಿಂತನೆ ಮಾಡಿಕೊಂಡು, ಲಕ್ಷಾಂತರ ಜನರ application ಗಳು ಏನು ಕಮಿಟಿ ಮುಂದಿವೆ, ಅಂಥವರಿಗೆ ತೊಂದರೆಯಾಗಬಾರದೆಂದು ಎನ್ನುವ ಎಚ್ಚರಿಕೆಯ ಮಾತನ್ನು ಕೂಡ ಇವತ್ತು ನಾನು ಹೇಳುವುದಕ್ಕಿಚ್ಛೆಪಡುತ್ತಿದ್ದೇನೆ. ಅದರ ಬಗ್ಗೆ ನೀವು ಸ್ಪಷ್ಟವಾದಂಥ ನಿಲುವನ್ನು ಹೇಳಬೇಕು, ಸ್ಪಷ್ಟೀಕರಣ ಕೊಡಬೇಕು, ಅವರಿಗೆ ಯಾವುದೇ ರೀತಿಯಿಂದ ತೊಂದರೆಯಾಗಬಾರದು. ಇಲ್ಲವೆಂದರೆ, ಒಂದು counter ಚಳುವಳಿ ಪ್ರಾರಂಭವಾಗುತ್ತದೆ. ಸಿಟಿಯಲ್ಲಿರತಕ್ಕಂಥದ್ದು ಒಂದು

ರೀತಿಯಾದರೆ, ಹಳ್ಳಿ ಪ್ರದೇಶಗಳಲ್ಲಿ ಒಂದು counter ಚಳುವಳಿ ಪ್ರಾರಂಭವಾಗುತ್ತದೆ, ಪುನಃ ಅದಕ್ಕೇನಾದರೂ ತೊಂದರೆಯಾದರೆ ಸರ್ಕಾರವೇ ಜವಾಬ್ದಾರಿ, ನೀವೆ ಜವಾಬ್ದಾರಿ, ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಉಪಾಧ್ಯಕ್ಷರೆ,

ಶ್ರೀ ಎ. ಕೃಷ್ಣಪ್ಪ :- ನಾನು ಎರಡು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಶ್ರೀ ಎಂ.ಪಿ. ಕುಮಾರ ಸ್ವಾಮಿ :- ಯಾವಾಗಲೂ ಮಾತನಾಡುವವರೇ ಮಾತನಾಡುವುದರಿಂದ ನಮಗೆ ಅವಕಾಶವಿಲ್ಲ. ನಮಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಆಮೇಲೆ ಮಾತನಾಡಿ ಯಾರು ಬೇಡ ಎನ್ನುತ್ತಾರೆ, ಬಿಲ್ ಮೇಲೆ ಮಾತನಾಡಲಿಕ್ಕೆ ಯಾರು ಬೇಡವೆನ್ನುತ್ತಾರೆ?

ಶ್ರೀ ಹೆಚ್. ಹಾಲಪ್ಪ :- ಆ ಮೇಲೆ ನೀವು ಮಾತನಾಡಿ ನಾವು ಈಗ ಮಾತನಾಡುತ್ತೇವೆ.

ಶ್ರೀ ಎಂ.ಪಿ. ಕುಮಾರ ಸ್ವಾಮಿ :- ಆಮೇಲೆ ಆಮೇಲೆ ಎಂದು ಹೇಳುತ್ತೀರಿ ಆದರೆ ಅವಕಾಶ ಕೊಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದಕ್ಕೆ ನೀವು ಹೇಳಬೇಕು, ನಾವು ಹೇಳುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು :- ನೀವು ಮಾತನಾಡುವವರೆವಿಗೂ ಬಿಲ್ ಪಾಸ್ ಮಾಡಲಿಕ್ಕೆ ಅವಕಾಶನೇ ಇಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಉಪಾಧ್ಯಕ್ಷರೆ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ಕೆಲವು ಸಂಶಯಗಳಿಗೆ ಸನ್ಮಾನ್ಯ ಕಂದಾಯ ಸಚಿವರು ಉತ್ತರಿಸಬೇಕಾಗುತ್ತದೆ. ಮೊದಲನೆ ಪ್ಯಾರಾದಲ್ಲಿ, ಕಾನೂನಿನ ಬಾಹಿರವಾಗಿ ಪ್ರವೇಶಿಸುವುದು ಅಥವಾ ಅದನ್ನು ಸ್ವಾಧೀನಪಡಿಸಿಕೊಳ್ಳುವುದು, ಎಂದು ಏನು ಹೇಳಿದ್ದೀರಿ, ರಾಜ್ಯದ ಅನೇಕ ಕಡೆ ಆಕಾರ ಬಂದು ದುರುಸ್ತು ಕಾರ್ಯ ತಾವು ಮಾಡಿಲ್ಲ. ನಮಗೆ ಗೊತ್ತಿಲ್ಲ. ನಿಮಗೆ grant ಮಾಡಿರುವವರಿಗೆ ಗೊತ್ತಿಲ್ಲ, ಜಮೀನು ಎಲ್ಲಿದೆ, ಯಾರ್‍ಯಾರದು ಎಷ್ಟೆಷ್ಟು

ಇದೆ, ಎಂದು ಗೊತ್ತಿಲ್ಲ, ನೀವು ಎಲ್ಲೂ ಇದುವರೆಗೆ, ಪೋಡಿಮಾಡಿ, ಕಲ್ಲು ಹಾಕಿಬಿಟ್ಟು ರೈತರಿಗೆ ತೋರಿಸಿಯೇ ಇಲ್ಲ. ಇದು ಈ ರಾಜ್ಯದ ದುರಂತ. ದುರುಸ್ತು ಆಗಿಲ್ಲದ ಕಡೆ ನಾನು ಕಾನೂನು ಬಾಹಿರವಾಗಿ ಪ್ರವೇಶ ಮಾಡಿದ್ದೇನೆ ಎನ್ನುವ ಕ್ಲಾಸ್ ಕೆಳಗಡೆ ನನಗೆ ನಾಳೆ ತಾವು ಜೈಲಿಗೆ ಹಾಕಿದರೆ ನಮ್ಮ ಸ್ಥಿತಿ ಏನು? ತಾವು ಉತ್ತರ ಹೇಳಬೇಕು. 1977–78 ರಿಂದ ಲ್ಯಾಂಡ್ ಏನು grant ಆಗಿದೆ, ಇವತ್ತಿನವರೆವಿಗೂ ಆಕಾರ ಬಂದು ದುರಸ್ತು ಆಗಿಲ್ಲ. ಸ್ಪಷ್ಟವಾಗಿ demarcation ಮಾಡಿ survey settlement ನವರು ನಿಮ್ಮ revenue ನವರು ನಿಂತು ಜಾಗವನ್ನೇ ಗುರುತು ಮಾಡಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವವರಿಗೆ ಗೊತ್ತೇ ಇಲ್ಲ. ನಾವು ಭೂಮಿಯನ್ನು ಪೂರ್ವ–ಪಶ್ಚಿಮ ಹಾಕಿ ಕೊಟ್ಟಿದ್ದರೆ ಅವರು ಉತ್ತರ–ದಕ್ಷಿಣ ಎಂದೇಳಿ ಗೇಯಿಕೊಂಡಿದ್ದಾರೆ. Land Grant Committee ಇದ್ದಾಗ ಯಾರು spot ನೋಡಿ ಕೊಡುತ್ತಿರಲಿಲ್ಲ. ತಾಲ್ಲೂಕು ಆಫೀಸ್‌ನಲ್ಲಿ ಕುಳಿತುಕೊಂಡು available land list ತೆಗೆದುಕೊಂಡು ಬಿಟ್ಟು ಮಂಜೂರು ಮಾಡಿಕೊಂಡು ಹೋಗಿಬಿಟ್ಟಿದ್ದಾರೆ. ಯಾರ್‍ಯಾರು ಎಲ್ಲೆಲ್ಲಿ ಇದ್ದಾರೋ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಆಗಿದೆ. ನನ್ನ ಕ್ಷೇತ್ರದ ಒಂದು ಊರಿನಲ್ಲಿ 400 ಎಕರೆ releas ಆಗಿರುವ land ಇದೆ. ಆ 400 ಎಕರೆ ಅಳತೆಯಲ್ಲಿ forest ಗೆ ಸೇರಿದ ಇನ್ನೊಂದು ಕಡೆ 400 ಎಕರೆ forest ಎಂದು ಏನು ಬಿಟ್ಟಿದ್ದಾರೆ, ಅದನ್ನು ಮಂಜೂರು ಮಾಡಿದ್ದಾರೆ. ನೀವು ಅವರ ಮೇಲೆ action ತೆಗೆದುಕೊಳ್ಳಬಹುದು ನೀನು ಅತಿಕ್ರಮಣ ಮಾಡಿದ್ದೀಯ ಅಥವಾ ಕಾನೂನು ಬಾಹಿರವಾಗಿ ಹಿಡುವ ಮಾಡಿಕೊಂಡಿದ್ದೀಯ ಎಂದು ಈಗ ನೀವು ಅವರನ್ನು ಜೈಲಿಗೆ ಹಾಕಿ ಬಿಡಬಹುದು ಅದಕ್ಕೆ ತಾವು ಸ್ಪಷ್ಟ ಮಾಡಬೇಕು. ಏಕೆಂದರೆ, ರಾಮಸ್ವಾಮಿಯವರ ಕಮಿಟಿಯ ನಾವೆಲ್ಲರೂ ಸದಸ್ಯರು ಇದ್ದೇವೆ, ನೀವು ಬೆಂಗಳೂರು ಮತ್ತು ಅದರ ಸುತ್ತಮು ತರುವುದಕ್ಕೆ ನಮ್ಮದೇನೂ ತಕರಾರು ಇಲ್ಲ, ಇದು ಆಗಬೇಕು. ಆದರೆ, ರಾಜ್ಯವ್ಯಾ ಕಾರ್ಯಚಟುವಟಿಕೆಗಳನ್ನು ನೀವು ಗುರುತಿಸಿಕೊಳ್ಳುವಾಗ ಮೊದಲೇ ನೀ ಜಮೀನನ್ನು ಅಳತೆ ಮಾಡಿಸಿ ಯಾವ್ಯಾವ ರೈತರ ಜಮೀನು ಎಂದು ತೋರಿಸಿದ್ದೀರಾ ಈ ಕ್ರಿಯೆ ಅಲ್ಲಿಂದ ಇದು ಆರಂಭವಾಗಬೇಕಾಗುತ್ತದೆ. ಯಾರೋ ಗೊತ್ತಿಲ್ಲದ ಮಾಡಿರುವುದಕ್ಕೆ ಇದು ಅಪರಾಧವೆಂದು ಅವನಿಗೆ ಶಿಕ್ಷೆ ಕೊಡುವುದಾದರೆ, ನಾ ಈ ರಾಜ್ಯದ ರೈತರ ಗತಿ ಏನು? ಎರಡನೆಯದು, ಆ ಅರ್ಜಿ ಯಾವ ಕಮಿ ಮುಂದೆ 94 (a), (b), (c) ಕೆಳಗೆ ಇದೆ, ಆ ಪ್ರಕರಣಗಳನ್ನು ಹೊರತುಪಡಿ

ಎಂದು ಹೇಳುತ್ತೀರಿ. ಆದರೆ, 10 ಗುಂಟೆ, 20 ಗುಂಟೆ, ಅರ್ಧ ಎಕರೆ ಜಾಸ್ತಿ ಬಂದು reject ಆಗಿರುವ ಕೇಸ್‌ಗಳನ್ನು ಬಗರ್‌ಹುಕುಂನಲ್ಲಿ ಏನು ಮಾಡಬೇಕೆಂದು ತಾವು ಇವತ್ತಿನವರೆಗೆ ಹೇಳಲಿಲ್ಲ. ಬಗರ್‌ಹುಕುಂ ನಲ್ಲಿ reject ಆಗಿರುವ ರೈತರು ಏನು ಮಾಡಬೇಕು? ಖಾಲಿ ಮಾಡಿಸುತ್ತೀರಾ? ತೋಟಗಳಿವೆ, 20 ರಿಂದ 40 ವರ್ಷದವರೆಗೆ ಅದರಲ್ಲಿ ಅನುಭವದಲ್ಲಿದ್ದಾರೆ. ಅವರಿಗೆ ಏನಾದರೂ ನೀವು ಮಾಡಬೇಕಾಗಿಲ್ಲವೇ? ಒಂದು ಸ್ವಲ್ಪ ಏರು-ಪೇರು ಆಗಿದ್ದರೆ, ನಾವು 5 ಎಕರೆ, 10 ಎಕರೆ ಮಂಜೂರು ಮಾಡಿ ಎಂದು ಕೇಳುವುದಿಲ್ಲ. ಆಕಸ್ಮಾತ್ತಾಗಿ ಆ ಕುಟುಂಬದ ಜಮೀನು 4 ಎಕರೆ 38 ಗುಂಟೆ ದಾಟಿತು ಎಂದರೆ ಮಂಜೂರು ಮಾಡಲಿಕ್ಕೆ ಆಗಿಲ್ಲ. ಅವರನ್ನೂ ಕೂಡ ನೀವು ಆಚೆ ಹಾಕುತ್ತೀರಾ? ಅವರನ್ನು ಕೂಡ ನೀವು ಜೈಲಿಗೆ ಹಾಕುತ್ತೀರಾ? ಅವರಿಗೇನು ಪರಿಹಾರ ಕೊಟ್ಟಿದ್ದೀರೆಂದು ನೀವು ನಮಗೆ ಹೇಳಬೇಕಲ್ಲವೆ? ನೀವು ಅರ್ಜಿ ಇರುವುದನ್ನು ಅಷ್ಟೇ ಹೇಳಿದ್ದೀರಿ. ಮತ್ತೆ ಕೆಲವು ಅರ್ಜಿಗಳು appeal ನಲ್ಲಿವೆ. ನೀವು ಬಗರ್‌ಹುಕುಂ ಕಮಿಟಿ ಸ್ವಾಯತ್ತ ಸಮಿತಿ ಎಂದು ಏನು ಮಾಡಿದಿರಿ, ಈಗ Assistant Commissioner ಗೆ appeal power ಕೊಟ್ಟಿದ್ದೀರಿ. ನಾವು ಮಾಡುವ ಎಲ್ಲಾ ತೀರ್ಮಾನಗಳು ಅಲ್ಲಿ ಹೋಗಿ pending ಇವೆ. ಅಲ್ಲಿರುವುದಕ್ಕೆ ಏನು ಹೇಳುತ್ತೀರಿ ಎಂದು ನೀವು ನಮಗೆ ಹೇಳಬೇಕಲ್ಲ? 2 ಗುಂಟೆ ಅವನು ಗೊತ್ತಿಲ್ಲದೇ ಮಾಡಿದ್ದರೂ ಇವತ್ತು ನೀವು ಅವನನ್ನು ಜೈಲಿಗೆ ಹಾಕುತ್ತೀರಿ. ಒಂದು ವರ್ಷ ಕಾರಾವಾಸ. ಅದು ಕಾರಾಗೃಹವಾಸ ಎಂದು ಇರಬೇಕಾಗಿತ್ತು, ಅದು ಬಿಲ್‌ನಲ್ಲಿ ಕಾರಾವಾಸವಾಗಿಬಿಟ್ಟಿದೆ. ಅದು ಕಾರಾವಾಸ ಅಲ್ಲ, ಅದು ಕಾರಾಗೃಹವಾಸ. ಉದ್ದೇಶಕ್ಕಾಗಿ ಮೂರನೆಯದು, "ಬಳಸಬಹುದು ಎಂದು ತಿಳಿದು ಸರ್ಕಾರಿ ಭೂಮಿಯ ಸಂಬಂಧದಲ್ಲಿ ಕೋಟಾ ದಾಖಲೆಗಳನ್ನು ಸೃಜಿಸಿರುವುದು." ಆಶ್ರಯ ಸಮಿತಿ ಮಾಡಬೇಕಾದರೆ, ಇಡೀ ರಾಜ್ಯದಲ್ಲಿ ಸರ್ಕಾರ ಈ ತಪ್ಪು ಮಾಡಿದೆ. I challenge ಹಾಗಾದರೆ ನೀವು ಅವರನ್ನೆಲ್ಲಾ ಒಳಗೆ ಹಾಕುತ್ತೀರಾ? ಮಲೆನಾಡಿನಲ್ಲಿ forest land ಗೊತ್ತಿದ್ದು site ಕೊಟ್ಟಿಲ್ಲವೆ? ಸೇಂದಿವನ ಎಂದು ಗೊತ್ತಿದ್ದು ನಾವೆಲ್ಲ site ಕೊಟ್ಟಿಲ್ಲವೆ? ಊರಿನಪಕ್ಕದ ಗೋಮಾಳದ ಜಾಗದಲ್ಲಿ ನಾವು site ಕೊಟ್ಟಿಲ್ಲವೆ? ಬಳಸಬಹುದು ಎಂದು ತಿಳಿದು, ನಾವು ಉದ್ದೇಶ ಪೂರ್ವಕವಾಗಿ, ಅಲ್ಲಿ ಏನು ಸೇಂದಿ land ಇತ್ತು ಸೇಂದಿವನ ಇತ್ತು ಎಂದರೆ site ಮಾಡಿ ಕೊಟ್ಟಿದ್ದೇವೆ. ಇಡೀ ಮಲೆನಾಡಿನಲ್ಲಿ Reserve Forest ನಲ್ಲೂ ಕೂಡ site ಇವತ್ತು ಊರುಗಳಾಗಿ ಬಿಟ್ಟಿವೆ. ಹಾಗಾದರೆ ನೀವು ಅವರನ್ನೆಲ್ಲಾ

ಆಚೆಗೆ ಹಾಕುತ್ತೀರಾ? ಮಾಡಿ ಕೊಟ್ಟವರನ್ನು ಜೈಲಿಗೆ ಹಾಕುತ್ತೀರಾ? ಇದರಲ್ಲಿ ನೀವು ಏನು ಹೇಳಿದ್ದೀರಿ? " ಯಾವ ಉದ್ದೇಶಕ್ಕಾಗಿ ಬಳಸಬಹುದು ಎಂದು ತಿಳಿದು ಸರ್ಕಾರಿ ಭೂಮಿಯ ಸಂಬಂಧದಲ್ಲಿ ಕೋಟಾ ದಾಖಲೆಗಳನ್ನು ಸೃಜಿಸಿರುವುದು", ಇದರ ಪ್ರಕಾರ ಕೋಟಾ ದಾಖಲೆಯಾಯಿತಲ್ಲವೆ? ನಾವು ಆಶ್ರಯ ಸಮಿತಿಯಿಂದ ಅವರಿಗೆ ಕಾರ್ಡು ಕೊಟ್ಟುಬಿಟ್ಟಿದ್ದೀವಲ್ಲ. ಈಗ ನಿಮ್ಮದೇ ಕೇಸ್ ಇದೆಯಲ್ಲ, ಬೆಂಗಳೂರು ಸಿಟಿ ಒಳಗಡೆನೇ forest ಎಂದು ನಿಮ್ಮ ಯು.ವಿ.ಸಿಂಗ್‌ರವರು ಕುಳಿತಿದ್ದಾರೆ. ಬಿಡಿಎನವರು land ಮಾಡಿ ಕೊಟ್ಟಿದ್ದಾರೆ. ಕೆಐಡಿಬಿ ನವರು ಲೇಔಟ್ ಮಾಡಿ ಕೊಟ್ಟಿದ್ದಾರೆ, ಈಗ ನೀವು ಯಾರ ಮೇಲೆ action ತೆಗೆದುಕೊಳ್ಳುತ್ತೀರಿ? Under this clause ನೀವು ಯಾರ ಮೇಲೆ Action ತೆಗೆದುಕೊಳ್ಳುತ್ತೀರಿ? Forest land ಎಂದು notification ಆಗಲಿಲ್ಲವೆನ್ನುವ ಒಂದು ಕಾರಣಕ್ಕೆ ನಿಮ್ಮ Revenue Commissioner ಅದನ್ನು ವಾಪಾಸ್ ತೆಗೆದುಕೊಂಡಿದ್ದೇವೆಂದು ಅಂದರೂ ಕೂಡ ಇವತ್ತು ನೀವು ಅದನ್ನು forest ಎಂದು ಇಟ್ಟುಕೊಂಡಿದ್ದೀರಲ್ಲಾ, ಸುಮಾರು 600–700 ಎಕರೆ ಜಮೀನು ಬೆಂಗಳೂರು ಸಿಟಿ ಒಳಗೆ ಇದೆ. ಇವತ್ತು ಅಲ್ಲಿ ನಿಮ್ಮ ಬಿಡಿಎ ಲೇಔಟ್ ಇದೆ. Industrial area ಇದೆ. ಹಾಗಾದರೆ ಇದನ್ನು ಮಾಡಿದವರು ಯಾರು? ಈಗ ನೀವು ಯಾರ ಮೇಲೆ action ತೆಗೆದುಕೊಳ್ಳುತ್ತೀರಿ? ನಾನು ಹೇಳುತ್ತೇನೆ, ಇದು ಉದ್ದೇಶಪೂರ್ವಕವಾಗಿ ಮಾಡಿಲದೇ ಇರಬಹುದು, ಆಕಸ್ಮಿಕವಾಗಿ ಆಗಿರಬಹುದು. But by creating this provision you are sending everybody to jail ಅವರೆಲ್ಲರನ್ನೂ ಜೈಲಿಗೆ ಹಾಕುತ್ತೀರಾ? 1900 ನಿಂದ ಈವರೆಗೆ ಇದ್ದ Conservator, Revenue Commissioner, ಅವರೆಲ್ಲರನ್ನೂ ನೀವು ಜೈಲಿಗೆ ಹಾಕುವುದಾದರೆ ನಾವು ಈ ಬಿಲ್ ಒಪ್ಪುತ್ತೇವೆ. you must jail them all. ಅದರಲ್ಲೇನು excuse ಇಲ್ಲ. ಸರ್ಕಾರಿ ಭೂಮಿ ಅಥವಾ Forest ಭೂಮಿಯನ್ನು ಮಾಡಿದ್ದಾರೆಂದು ನೀವು ಹೇಳುವಾಗ ಇದರ ಬಗ್ಗೆ ಸ್ವಲ್ಪ ಆಲೋಚನೆಯನ್ನು ಮಾಡಿ ಬಿಲ್‌ಗಳನ್ನು ಇಡಬೇಕಾಗುತ್ತದೆ. ಈಗ ಆಗಿರುವುದು ಏನು? ನಮ್ಮ ವಾದ ಏನೆಂದರೆ, ಯಾರು ಅತಿಕ್ರಮಣ ಮಾಡಿದ್ದಾರೆ, ಕಳ್ಳತನದ ಕೃತ್ಯವೆಸಗಿದ್ದಾರೆ, ದ್ರೋಹ ಮಾಡಿ ಸರ್ಕಾರಿ ಭೂಮಿ ಹೊಡೆದುಕೊಂಡಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು. ಹಾಗಂತ ಆಕಸ್ಮಿಕವಾಗಿ ಏನಾದರೂ ಆಗಿ ಅದನ್ನು ಆ ಶಿಕ್ಷೆಯ ಒಳಗಡೆ ತರುವಂಥ provision ನೀವು ಇಟ್ಟುಕೊಂಡು ಬಿಟ್ಟರೆ, ನಾಳೆ ಗತಿ

ಏನು? ನೀವು ಇದನ್ನು ಎಲ್ಲಾದರೂ explain ಮಾಡಬೇಕು, ಬೇಕಾದಷ್ಟು ಕಡೆ, Health Department ಕೊಟ್ಟಿರುವ ಭೂಮಿಯಲ್ಲಿ ಬೇರೆ ಯಾರೋ ಇದ್ದಾರೆ, Horticulture department ಗೆ ಕೊಟ್ಟಿರುವ ಜಮೀನಿನಲ್ಲಿ ಬೇರೆ ಯಾರು ಇದ್ದಾರೆ, ನಿಮ್ಮ ಅಮೃತ ಮಹಲ್ ಫಾರಂ ಅನ್ನು ತೆಗೆಸಿ ನೋಡಿ. ಅದರ ಕಥೆ ಇವತ್ತು ಏನಾಗಿದೆ? ಇವತ್ತು possession ನಲ್ಲಿ ಯಾರ್ಯಾರು ಇದ್ದಾರೆ? ನಿಮ್ಮ Government land ನಲ್ಲಿ ಬೇರೆ ಇಲಾಖೆಯವರು ಇದ್ದಾರೆ, ಆದರೆ ಅದರ ಬಗ್ಗೆ MR ಇಲ್ಲ. Transfer of titles ಇಲ್ಲ. ಅವೆಲ್ಲವೂ ಈ Provision ಕೆಳಗಡೆ illegal act ಆಗಿ ಹೋಯಿತು. ಅವರನ್ನು ತಾವು ಏನು ಮಾಡುತ್ತೀರಿ ಎಂದು ಹೇಳಬೇಕು. ನಾವು ಕಡ್ಡಾಯವಾಗಿ ಕೇಳುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ :- This Bill is only limited to the revenue land. There is one more bill.

ಶ್ರೀ ಜೆ.ಸಿ. ಮಾಧುಸ್ವಾಮಿ :- ಯಾವುದೇ ಸರ್ಕಾರಿ ಭೂಮಿಯನ್ನು ಅವರು revenue ಎಂದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಅದೇ ಸರ್ಕಾರಿ ಭೂಮಿ ಎಂದರೂ.....

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಇದರಲ್ಲಿ ಜೈಲಿಗೆ ಹಾಕುವುದು, ದಂಡ ಹಾಕುವುದಕ್ಕೆ act ನ್ನು ತಂದಿರುವುದು. ಬೇರೆ regularization ಆಮೇಲೆ ಚರ್ಚೆ ಮಾಡುತ್ತೇವೆ. ಸರ್ಕಾರಿ ಭೂಮಿ ಎಂದರೆ ಅದನ್ನು revenue land ಎಂದು ಭಾವಿಸಲಿಕ್ಕಾಗುವುದಿಲ್ಲ. ಅಮೃತ ಮಹಲ್ ಅದು ಕೂಡ ಸರ್ಕಾರಿ ಭೂಮಿಯೇ, ಗ್ರಾಮಠಾಣಾ ಕೂಡ ಸರ್ಕಾರಿ ಭೂಮಿಯೇ to that extent, ದಂಡು ಪ್ರದೇಶದ ಭೂಮಿಯೂ ಸರ್ಕಾರಿ ಭೂಮಿಯೆ, We cannot say revenue land is only Government land. ಹಾಗಾದರೆ ಗ್ರಾಮಠಾಣಾಗಳು ಯಾರದು? ದಂಡು ಪ್ರದೇಶ ಯಾರದು?

ಶ್ರೀ ಎಂ.ಪಿ. ಪ್ರಕಾಶ್ :- ಅದಕ್ಕೆ ಬೇರೆ ಇನ್ನೊಂದು ಬಿಲ್ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಸ್ಪಷ್ಟವಾಗಿ ಹೇಳಬೇಕು. ಸರ್ಕಾರಿ ಭೂಮಿ ಎಂದು ತಿಳಿದು ಅದನ್ನು ಪರಿವರ್ತನೆ ಮಾಡಿದ್ದರೆ, ಕೋಟಾ ದಾಖಲೆಗಳನ್ನು ಸೃಷ್ಟಿಸಿಬಿಟ್ಟು ಅಂಥ ಭೂಮಿಯನ್ನು ಬೇರೆ ಕಾರಣಕ್ಕಾಗಿ ಬಳಸಿರುವವರ ಮೇಲೇನೂ

action ತೆಗೆದುಕೊಳ್ಳುತ್ತೀರಾ? ಕೊನೆಯದಾಗಿ ನಾವು ಕೇಳುವುದು, ಗ್ರಾಮೀಣ ಪ್ರದೇಶಕ್ಕೆ ದಯಮಾಡಿ ಈ ಶಿಕ್ಷೆ ಹಾಕುವುದು ಜೈಲಿಗೆ ಕಳುಹಿಸುತ್ತೇವೆಂದು ಹೇಳುವುದು, ದಂಡ ಹಾಕುತ್ತೇವೆ ಎನ್ನುವ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬಾರದು. ಅದರಲ್ಲೂ ಮಲೆನಾಡಿನಿಂದ ಹಿಡಿದು ಬಯಲುಸೀಮೆಗಳೇನಿದೆ, ನೀವು ಎಲ್ಲಿಯವರೆಗೆ ಪಕ್ಕಾಪೋಡಿ ಮಾಡಿಸುವುದಿಲ್ಲ, ಎಲ್ಲಿಯವರೆಗೆ ಅವತ್ತಿನ better cultivation scheme ಗಳನ್ನು implement ಮಾಡುವುದನ್ನು ನಿಲ್ಲಿಸುವುದಿಲ್ಲ, 10 ಗುಂಟೆ 20 ಗುಂಟೆ ನನಗೆ Assistant Commissioner better cultivation ನಲ್ಲಿ ಮಾಡುವಂಥ ಅವಕಾಶ ಕಲ್ಪಿಸಿಕೊಟ್ಟಿದ್ದವರು ಇವತ್ತು ಶಿಕ್ಷೆ ಮಾಡುತ್ತೇವೆಂದು ಹೇಳಲಿಕ್ಕೆ ಆಗುವುದಿಲ್ಲ. ಇದೆಲ್ಲವನ್ನೂ ತಾವು ಸರಿಪಡಿಸಿಕೊಂಡು ಶಾಸನ ಮಾಡಬೇಕೆಂದು ಹೇಳಿ ನಾನು ನಿವೇದನೆ ಮಾಡುತ್ತೇನೆ.

ಉಪಾಧ್ಯಕ್ಷರು :- ಮಾನ್ಯ ಕೃಷ್ಣಪ್ಪನವರೆ, ತಾವು ಮಾತನಾಡಿ.

ಶ್ರೀ ಎಂ.ಪಿ. ಕುಮಾರ ಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರ ಪ್ರದೇಶದ ಶಾಸಕರೇ ಮಾತನಾಡುತ್ತಿದ್ದರೆ ನಾವು ಯಾವಾಗ ಮಾತನಾಡಬೇಕು. ನಾವು ಮಲೆನಾಡು ಭಾಗದಿಂದ ಬಂದಿದ್ದೇವೆ. ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯವರು ಮಾತನಾಡಬೇಕಾಗಿದೆ. ಇವತ್ತಿನ ದಿವಸ ನಮ್ಮ ಭಾಗದವರಿಗೆ ಅಪಾಯವಿದೆ. ಆದ್ದರಿಂದ, ಮೊದಲು ನಮಗೆ ಅವಕಾಶ ಕೊಡಿ.

(ಗೊಂದಲ)

ಉಪಾಧ್ಯಕ್ಷರು :- ಅವರು ಮುಗಿಸಿದ ನಂತರ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಪಿ. ಕುಮಾರ ಸ್ವಾಮಿ :- ಕೊಡಗು ಮತ್ತು ಚಿಕ್ಕಮಗಳೂರಿಗೆ ಇದರ ಸಮಸ್ಯೆ ಜಾಸ್ತಿಯಾಗುತ್ತದೆ. ಆದ್ದರಿಂದ, ಮೊದಲು ನಮಗೆ ಅವಕಾಶ ಕೊಡಿ.

ಉಪಾಧ್ಯಕ್ಷರು :- ಇದು ಕೇವಲ ಒಂದೇ ಕ್ಷೇತ್ರಕ್ಕೆ ಸಂಬಂಧಪಟ್ಟಿಲ್ಲ. ಬೆಂಗಳೂರಿಗೂ ಸಹ ಸಂಬಂಧಪಟ್ಟಿದೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಷಯವಾಗಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ತಮಗೂ ಸಹ ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಉಪಾಧ್ಯಕ್ಷರೆ, ಅವರೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು :- ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎ. ಕೃಷ್ಣಪ್ಪ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕಂಥ ಈ ಒಂದು ಬಿಲ್‌ಗೆ ಸಂಬಂಧಪಟ್ಟಂತೆ ಬೆಂಗಳೂರು ನಗರ ಜಿಲ್ಲೆಯ ಪೂರ್ವ ತಾಲ್ಲೂಕಿಗೆ ಸಂಬಂಧಪಟ್ಟಂಥ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಹಾಲಪ್ಪ :- ಬರೀ ಬೆಂಗಳೂರಿನ ಬಗ್ಗೆಯೇ ಮಾತನಾಡುತ್ತಿದ್ದಾರೆ. ಮೊದಲು ನಮಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ :- ನಾವು ಕೂಡ ಓಟು ತೆಗೆದುಕೊಂಡು ಇಲ್ಲಿಗೆ ಬಂದಿದ್ದೇವೆ. ನಮಗೂ ಕೂಡ ಮಾತನಾಡುವುದಕ್ಕೆ ಅವಕಾಶ ಇದೆ.

ಶ್ರೀ ಎಂ.ಪಿ. ಕುಮಾರ ಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ತಾವು ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಯ ಶಾಸಕರುಗಳಿಗೆ ಮಾತನಾಡುವುದಕ್ಕೆ ಮೊದಲು ಅವಕಾಶ ಕೊಡಬೇಕು. ಬೆಂಗಳೂರಿನಲ್ಲಿ ಸಾಕಷ್ಟು ಭೂ ಮಾಫಿಯಾ ನಡೆದಿದೆ.

ಶ್ರೀ ಹೆಚ್. ಹಾಲಪ್ಪ :- ಯಾವಾಗಲೂ ಬೆಂಗಳೂರು ಬಗ್ಗೆ ಹೇಳುತ್ತಿದ್ದಾರೆ. ನಮ್ಮ ಭಾಗದ ಬಗ್ಗೆ ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

(ಗೊಂದಲ)

ಶ್ರೀ ಎಂ.ಪಿ. ಕುಮಾರ ಸ್ವಾಮಿ :- ಬೆಂಗಳೂರಿನಲ್ಲಿ ಈ ರೀತಿಯಾಗಿ ಮಾಡಿರತಕ್ಕಂಥವರನ್ನು ತಾವು ಜೈಲಿಗೆ ಹಾಕಿ ಪರವಾಗಿಲ್ಲ. ಆದರೆ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಯವರಿಗೂ ಸಹ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಉಪಾಧ್ಯಕ್ಷರು :- ಮಾನ್ಯ ಕುಮಾರ ಸ್ವಾಮಿಯವರೆ, ಮಾನ್ಯ ಕೃಷ್ಣಪ್ಪನವರು ಮಾತನಾಡಿದ ನಂತರ ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಹಾಲಪ್ಪನವರೆ, ಅವರು ಮಾತನಾಡಿದ ಬಳಿಕ

ತಮಗೂ ಸಹ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೇನೆ. ಮತ್ತೆ ಆ ಊರು, ಈ ಊರು ಎಂದು ಹೇಳುವುದಕ್ಕೆ ಹೋಗುತ್ತಿದ್ದೀರಿ. ಇಲ್ಲಿ ಎಲ್ಲಾ ಊರು ಒಂದೇ. ಈಗ ಮಾತನಾಡುತ್ತಿರುವ ವಿಷಯ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥದ್ದು, ಇದು ಕೇವಲ ನಿಮ್ಮ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂಥದ್ದಲ್ಲ.

ಶ್ರೀ ಎ. ಕೃಷ್ಣಪ್ಪ (ವರ್ತೂರು) :- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರ ಜಿಲ್ಲೆಯ ಪೂರ್ವ ತಾಲ್ಲೂಕಿಗೆ ಸಂಬಂಧಪಟ್ಟಂತೆ ನಾನು ಕೆಲವು ಮಾಹಿತಿಗಳನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. 94 (c) ಯಲ್ಲಿ ಅರ್ಜಿಗಳನ್ನು ಹಾಕಿಕೊಳ್ಳಲು ನಮ್ಮ ಸರ್ಕಾರ ಎರಡು ಸಲ ಅವಕಾಶವನ್ನು ಕೊಟ್ಟಿತು. ಆ ಸಂದರ್ಭದಲ್ಲಿ ನನ್ನ ಪ್ರಕಾರ 35 ರಿಂದ 40% ಜನರು ಅರ್ಜಿಗಳನ್ನು ಹಾಕಿಲ್ಲ. ನಾನು ಯವ್ಯಾವ ಊರುಗಳೆಂದು ಹೆಸರುಗಳನ್ನು ಹೇಳುತ್ತೇನೆ, ಅವರು ಊರುಗಳ ಹೆಸರುಗಳನ್ನು ಬರೆದುಕೊಂಡು ಪರಿಶೀಲನೆ ಮಾಡಲಿ. ಆ ಊರುಗಳು ಯಾವ್ಯಾವುದೆಂದರೆ, ವಿಜಯನಗರ, ಗಾಂಧಿಪುರ, ಹೆಗಡೆ ನಗರ ಇರಬಹುದು, ಸುಮಾರು 70–80 ಜಾಗಗಳಲ್ಲಿ, 1985 ರಲ್ಲಿ ನಾನು ಎಂಎಲ್ಎ ಆಗುವುದಕ್ಕಿಂತ ಮುಂಚಿತವಾಗಿನಿಂದಲೂ ಅಲ್ಲಿ ಮನೆಗಳಿದ್ದವು. ಅರ್ಜಿ ಹಾಕಿರುವ ಪೈಕಿ ಸುಮಾರು 46 ಅಥವಾ 56% ನಷ್ಟು ರೆಗ್ಯೂಲರೈಸ್ ಮಾಡಲಾಗಿದೆ. ಆದರೆ, ಪಕ್ಕದ ಮನೆಯವರು ಅರ್ಜಿಗಳನ್ನೇ ಹಾಕಿಲ್ಲ. ಅಂಥವರಿಗೆ ತಾವು ಏನು ಮಾಡುತ್ತೀರಿ? ಇದೊಂದು ಪಿಕ್ಚರ್. ಆದರೆ ಎರಡನೇ ಪಿಕ್ಚರ್ ಏನೆಂದರೆ, ಅಲ್ಲಿ ಜಮೀನು ಉಳಿಮೆ ಮಾಡುತ್ತಿರುವ ರೈತರೆಲ್ಲರೂ ಅರ್ಜಿಗಳನ್ನು ಹಾಕಿದ್ದಾರೆ. ಅಲ್ಲಿ ಬೇಕಾದಷ್ಟು ಡಿಸ್‌ಪ್ಯೂಟ್ ಆಗಿದ್ದು, ಈ ಡಿಸ್‌ಪ್ಯೂಟ್‌ಗಳು ಇವತ್ತಿನವರೆಗೂ ಕೂಡ ಸೆಟ್ಲ್ ಆಗಿಲ್ಲ. ಆದರೆ, ನಾನೇ ಉಳುಮೆ ಮಾಡಿಸಿದ್ದೇನೆ ಮತ್ತು ನಾನೇ ಪೊಸೆಷನ್‌ನಲ್ಲಿದ್ದೇನೆ. ಇಂಥವುಗಳಿಗೆ ತಾವು ಏನು ಮಾಡುತ್ತೀರಾ? ಮೂರನೆಯದು ಏನೆಂದರೆ, ಈ ತಿದ್ದುಪಡಿಗೆ ಸಂಬಂಧಪಟ್ಟ ಹಾಗೆ ಹೋಲ್‌ಸೇಲ್ action propose ಮಾಡಿದ್ದಾರೆ. ಹೋಲ್‌ಸೇಲ್ ಆಕ್ಷನ್ ಸಂಬಂಧಪಟ್ಟಂತೆ ಹೇಳುವುದಾದರೆ, ಈಗ ದೇವಸ್ಥಾನಕ್ಕೆ ಸಂಬಂಧಪಟ್ಟಂಥ ಭೂಮಿಗಳು ಟ್ರಿಬ್ಯುನಲ್‌ನಲ್ಲಿ ಮತ್ತು ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಮತ್ತೆ ಕೆಲವು ಘಟನೆಗಳು ಸುಪ್ರೀಂ ಕೋರ್ಟ್‌ಗೆ ಕೂಡ ಹೋಗಿವೆ, ಅಥವಾ ಸರ್ಕಾರದ ಮುಂದೆ ಹಾಕಿಕೊಂಡಿರತಕ್ಕಂಥ ಅಪೀಲುಗಳು ಪೆಂಡಿಂಗ್ ಇವೆ. ಈ ಬಿಲ್‌ನಲ್ಲಿ ಇವ್ಯಾವುದಕ್ಕೂ ಪರಿಹಾರವನ್ನು ತೋರಿಸದೇ, ಏಕದಂ ನಾವು ಎಲ್ಲರನ್ನೂ ಜೈಲಿಗೆ ಕಳುಹಿಸುತ್ತೇವೆಂದು ಮತ್ತು ಪೆನಾಲ್ಟಿ ಹಾಕುತ್ತೇವೆಂದು ಹೇಳತಕ್ಕಂಥದ್ದು ಸರಿಯಾದಂಥ

ವಿಚಾರವಲ್ಲ. ರಾಜ್ಯದಲ್ಲಿ ಇಂಥ ಪ್ರಕರಣಗಳು ಎಷ್ಟಿವೆ? ಈ ಪ್ರಕರಣಗಳಿಗೆ ಪರಿಹಾರ ಏನೆಂಬುದರ ಬಗ್ಗೆ ಈ ಸದನಕ್ಕೆ ಅವರು ಸರಿಯಾದ ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಇವತ್ತಿನ ದಿವಸ ಸುಮಾರು 6 ರಿಂದ 7 ಸಾವಿರ ಮನೆಗಳು ಒಂದೊಂದು ಜಾಗದಲ್ಲಿವೆ. ಇವುಗಳಲ್ಲಿ ಸುಮಾರು 2 ಸಾವಿರ ಮನೆಗಳು ರೆಗ್ಯುಲರೈಸ್ ಆಗಿವೆ. ಇನ್ನೂ 4 ಸಾವಿರ ಮನೆಗಳು ರೆಗ್ಯುಲರೈಸ್ ಆಗಿಲ್ಲ. ಈ ಮನೆಗಳನ್ನು ನೀವು ಡೆಮಾಲಿಷ್ ಮಾಡುತ್ತೀರಾ? ಅಥವಾ ಅವರೆಲ್ಲರನ್ನೂ ಜೈಲಿಗೆ ಕಳುಹಿಸುತ್ತೀರಾ? ಆದ್ದರಿಂದ ಇದೊಂದು ಗೊಂದಲ ಸೃಷ್ಟಿ ಮಾಡಿರತಕ್ಕಂಥ ಶಾಸನವಾಗಿದೆ. ನಿಜವಾದಂಥ ಚಿತ್ರವನ್ನು ಇವರು ಕೊಡಬೇಕಾಗುತ್ತದೆ. ನಾನು ಒಂದು ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಬಿಡಿಎ ರವರು ನಮ್ಮ ಪ್ರದೇಶದಲ್ಲಿ ಬಡಾವಣೆಗಳನ್ನು ಮಾಡಿದ್ದಾರೆ. ಅವರು ಕೆರೆಗಳನ್ನು ಸೇರಿಸಿಕೊಂಡು ಬಡಾವಣೆ ಮಾಡಿ ಈಗ ಮಾರಾಟ ಕೂಡ ಮಾಡಿದ್ದಾರೆ. ಆದ್ದರಿಂದ, ಈಗ ಬಿಡಿಎ ಯಲ್ಲಿ ಯಾರನ್ನು ಜೈಲಿಗೆ ಕಳುಹಿಸುತ್ತೀರಿ? ಮತ್ತೆ Industrial Development Authority ಯವರು ಸಹಾ ಗೋಮಾಳ ಮತ್ತು ಕೆರೆಯ ಅಂಗಳ ಹಾಗೂ ರಾಜಕಾಲುವೆಗಳನ್ನು ಸೇರಿಸಿಕೊಂಡು Industrial area develop ಮಾಡಿ ಈಗಾಗಲೇ ಅಲಾಟ್‌ಮೆಂಟ್ ಕೂಡ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ನೀವು ಹೇಳಿರತಕ್ಕಂಥ ಪ್ರಕರಣಗಳಲ್ಲಿ ಈ ಸದನಕ್ಕೆ ಅವರು ಸರಿಯಾದ ಮಾಹಿತಿಗಳನ್ನು ಕೊಡಬೇಕಾಗುತ್ತದೆ. Absolute position ನಲ್ಲಿ ಸುಮಾರು 50–60 ವರ್ಷಗಳನ್ನು ಇದುವರೆಗೂ ಸೇರಿಸಿ ಈ ಕಮಿಟಿಯವರು ಈಗ ಒತ್ತುವರಿಯಾಗಿದೆ ಎಂದು ಕೆಲವು ಪ್ರಕರಣಗಳಲ್ಲಿ ತೀರ್ಮಾನಕ್ಕೆ ಬಂದಿದ್ದಾರೆ. ಮಾನ್ಯ ಕಂದಾಯ ಮಂತ್ರಿಯವರಲ್ಲಿ ನಾನು ಕೇಳುವ ಪ್ರಶ್ನೆ ಏನೆಂದರೆ, ಈಗ ಕ್ರಿಮಿನಲ್ ಕೇಸ್‌ಗಳನ್ನು ಹಾಕುತ್ತಿದ್ದೀರಿ. ಇದಕ್ಕೆ ಯಾರು ಅರ್ಹರಿದ್ದಾರೆಯೋ ಅವರ ಮೇಲೆ ಹಾಕಿಕೊಳ್ಳಿ, ನಾವೇನು ಮಾಡುವುದಕ್ಕೆ ಆಗುವುದಿಲ್ಲ. ತಪ್ಪು ಮಾಡಿದ್ದರೆ ಅವರು ಅನುಭವಿಸಬೇಕಾಗುತ್ತದೆ. ಆದರೆ, ಹಳ್ಳಿಗಳಲ್ಲಿ ಏನಾಗಿದೆ ಎಂದರೆ ಯಾರ್‍ಯಾರು ಬೇಕಾಗಿದ್ದಾರೆಯೋ ಅವರೆಲ್ಲರನ್ನು ಬಿಟ್ಟುಬಿಟ್ಟಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್‌ರವರ ಗಮನಕ್ಕೆ ತರುವುದೇನೆಂದರೆ, ಯಾವ್ಯಾವ ಊರಿನಲ್ಲಿ ಯಾರ್‍ಯಾರನ್ನು ಬಿಡಬೇಕಾಗಿದೆಯೋ ಅಂಥವರ ಹೆಸರನ್ನು ಪಟ್ಟಿಯಿಂದ ಬಿಟ್ಟುಬಿಟ್ಟಿದ್ದೀರಿ. ಯಾರನ್ನು ಸೇರಸಬೇಕಾಗಿದೆಯೋ ಅವರನ್ನು ಪಟ್ಟಿಯಲ್ಲಿ ಸೇರಿಸಿ ಪೊಲೀಸ್ ಸ್ಟೇಷನ್‌ಗೆ ಪಟ್ಟಿಯನ್ನು ಕೊಟ್ಟಿದ್ದಾರೆ. ಈಗ ಪೂರ್ವ

ತಾಲ್ಲೂಕಿನಲ್ಲಿ ಒಂದೊಂದು ಮನೆಗೆ ಸಂಬಂಧಪಟ್ಟಂತೆ ಲಿಸ್ಟ್ ಕೊಡುತ್ತೇನೆ. ಅದೇನೆಂದರೆ, ಒಂದು ಊರಿನಲ್ಲಿ 10 ಜನ ಎನ್‌ಕ್ರೋಚ್‌ಮೆಂಟ್ ಮಾಡಿದ್ದರೆ ನಾಲ್ಕು ಜನರ ಮೇಲೆ ಕೇಸ್ ಹಾಕಿದ್ದಾರೆ. ಉಳಿದ 6 ಜನರನ್ನು ನಿಮ್ಮ ರೆವಿನ್ಯು ಇನ್‌ಸ್ಪೆಕ್ಟರ್ ಮತ್ತು ಸರ್ವೆಯರ್ ಹಾಗೂ ನಿಮ್ಮ ಆಫೀಸರ್‌ಗಳು ಸೇರಿಕೊಂಡು ಬಿಡುಗಡೆ ಮಾಡಿದ್ದಾರೆ. ಆದ್ದರಿಂದ, ಇಲ್ಲಿ ಪೆನಾಲ್ಟಿ ಮತ್ತು ಜೈಲ್‌ಗೆ ಕಳುಹಿಸತಕ್ಕಂಥದ್ದು ಎಲ್ಲಿ ಬಂತು? ಇಂಥ ಸಾವಿರ ಅಂಶಗಳು ಇರುವುದರಿಂದ ಸರಿಯಾದ ಅಂಶಗಳನ್ನು ಈ ಮನೆಯ ಮುಂದಿಟ್ಟು, ಅದರ ಬಗ್ಗೆ ನಾವು ನಿಜವಾದಂಥ ಮತ್ತು ನಿಖರವಾದಂಥ ವಾದ ವಿವಾದಗಳನ್ನು ಮಂಡನೆ ಮಾಡಿ ಪ್ರತಿಯೊಂದು ವಿಚಾರಗಳಿಗೆ ಪರಿಹಾರವನ್ನು ಕೊಡುವಂಥ ಸಂದರ್ಭ ಇದ್ದರೆ ಮಾತ್ರ ಈ ಬಿಲ್ ಅನ್ನು ಅವರು Introduce ಮಾಡಲಿ, ಇಲ್ಲದಿದ್ದರೆ ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಒಂದು ದಂಧೆಯ ಜನರು ಈ ರೀತಿಯಾಗಿ ಮಾಡುತ್ತಿದ್ದಾರೆಂದು ಶ್ರೀಮಾನ್ ಖರ್ಗೆಯವರು ಮಾತನಾಡುವ ಸಮದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಬಡಪಾಯಿ ಆಗಿರುವ ಪೇಂಟರ್, ಟೈಲರ್, ಆಟೋರಿಕ್ಷಾ ಓಡಿಸುವಂಥವರು ಮತ್ತು ಗಾರೆ ಕೆಲಸ ಮತ್ತು ಬಡಗಿ ಕೆಲಸ ಮಾಡತಕ್ಕಂಥವನು ಸುಮಾರು 30–40 ವರ್ಷಗಳ ಹಿಂದೆ ಮನೆ ಕಟ್ಟಿಕೊಂಡಿದ್ದರೆ, ಆ ಮನೆಯನ್ನು ಡೆಮಾಲಿಷ್ ಮಾಡುತ್ತೀರಾ? ಇದನ್ನು ಡೆಮಾಲಿಷ್ ಮಾಡುವುದಕ್ಕೆ ಬರುವುದಿಲ್ಲ. ನೀವು ಅವರಿಗೆ ಮನೆಗಳನ್ನು ಕಟ್ಟಿಕೊಡಬೇಕಾಗುತ್ತದೆ. ಮತ್ತೆ ಅವರ ವೆಲ್‌ಫೇರ್ ಅನ್ನು ನೋಡಬೇಕಾಗುತ್ತದೆ. ಅದನ್ನು ಬಿಟ್ಟು ಏಕಾಏಕಿ one end to the other end of the State ಎಂದು ಜಾರಿ ಮಾಡುತ್ತೇನೆಂದು ತಾವು ಹೇಳಿದರೆ, ಅದು ನಿಮ್ಮ ಕನಸಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ಇದನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ಈ ಮನೆಗೆ 176 ತಾಲ್ಲೂಕುಗಳ ಮಾಹಿತಿಗಳನ್ನು ಕೊಡಬೇಕು. ಯಾವ್ಯಾವ ತರಹದ ಪರಿಸ್ಥಿತಿಯಲ್ಲಿ ಆತ ದುರಾಕ್ರಮಣ ಮಾಡಿಕೊಂಡಿದ್ದಾನೆಂದು ಹೇಳಬೇಕು. ದುರಾಕ್ರಮಣ ಎಂಬ ಪದ ಬೆಂಗಳೂರಿನ ಸುತ್ತಮುತ್ತಲೂ ಕೆಲವರಿಗೆ ಅನ್ವಯಿಸಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ತಾವು ಎಲ್ಲವನ್ನು ಏಕಾ ಏಕಿ ಮಾಡುತ್ತಿದ್ದೀರಿ. ಇಲ್ಲದಿದ್ದರೆ ತಾವು ಬಿಲ್‌ನಲ್ಲಿ ಎಕನಾಮಿಕ್ ಕ್ರೈಟೀರಿಯಾ ಇಟ್ಟಿದ್ದೀರಾ? ಇಟ್ಟಿಲ್ಲ. ಸಮಾಜದ ಯಾವ ಒಂದು ಗುಂಪಿಗೆ ಇದು ಅನ್ವಯಿಸುತ್ತದೆ ಎಂಬ ಮಾತನ್ನು ಸಹ ಹೇಳಿಲ್ಲ. 5 ಗುಂಟೆ, 2 ಗುಂಟೆಯಲ್ಲಿ 20 X 30, 40 X 50 ಮಾಡಿರತಕ್ಕಂಥದ್ದಕ್ಕೂ ಸಹ principle

same ಆಯಿತು. ಇವರಿಗೆಲ್ಲಾ ಜೈಲಿಗೆ ಕಳುಹಿಸುತ್ತೇನೆಂದು ಮತ್ತು ಅವರಿಗೆ ಪೆನಾಲ್ಟಿ ಹಾಕುತ್ತೇನೆಂದು ಹೇಳಿದರೆ ಇದು ಈ ಸರ್ಕಾರಕ್ಕೆ ಸಾಧ್ಯವಾಗುತ್ತದೆಯೇ? ಆದ್ದರಿಂದ, ಈ ಬಿಲ್ ಅನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಿದ್ದೇನೆ. ಇವತ್ತಿನ ದಿವಸ ಎಲ್ಲರ ಕಣ್ಣು ಬೆಂಗಳೂರಿನ ಮೇಲೆ ಇರತಕ್ಕಂಥದ್ದು ಸಂತೋಷ. ಮತ್ತೆ ಇದರಿಂದ ಸುಮಾರು 50–60 ಸಾವಿರ ಕೋಟಿ ರೂಪಾಯಿ ಬರುತ್ತದೆಂದು ಹೇಳಿದ್ದಾರೆ. ಇದೂ ಕೂಡ ಬಹಳ ಸಂತೋಷ. ಯಾರ್‍ಯಾರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆಂಬುದನ್ನು ಮತ್ತು ಅವರು ಎಕನಾಮಿಕ್ ಸ್ಟೇಟಸ್ ಏನು ಎನ್ನತಕ್ಕಂಥ ಪಟ್ಟಿಯನ್ನಾದರೂ ಮುಂದಿನ ಅಧಿವೇಶನದಲ್ಲಿ ತೆಗೆದುಕೊಂಡು ಬನ್ನಿ. ಕೂಲಿ ಮಾಡುವವನನ್ನು ಮತ್ತೆ ಆಟೋರಿಕ್ಷಾ ಓಡಿಸುವವರನ್ನು ಹಾಗೂ ಇನ್ನೇನೋ ಕೆಲಸ ಮಾಡಿ ಬದುಕುತ್ತಿರುವವರನ್ನು ಸೇರಿಸುತ್ತೇವೆಂದು ಹೇಳಿದರೆ ಇದಕ್ಕೆ ನಾವು ಒಪ್ಪಿಗೆ ಕೊಡುವುದಕ್ಕೆ ಆಗುವುದಿಲ್ಲ. Because it is the social interest, it is the interest of the poorest people. ತುಳಿತಕ್ಕೆ ಗುರಿಯಾಗಿರುವವರಲ್ಲಿ 95% ನಷ್ಟು ಜನರು ಇದರಲ್ಲಿ ಇದ್ದಾರೆ. ಯಾರೋ ಅನುಕೂಲವಾಗಿರುವಂಥ ಜನರು 1, 2, 4, 5 ಎಕರೆ ಜಮೀನಿಗೆ ಹಾಕಿಕೊಂಡಿದ್ದರೆ, you deal them separately and bring an enactment which suits only to that category of citizens. ಆದ್ದರಿಂದ ಎಲ್ಲರಿಗೂ ಸೇರಿಸಿ ಮಾಡತಕ್ಕಂಥದ್ದಲ್ಲ, ಬಡವರು, ತುಳಿತಕ್ಕೆ ಗುರಿಯಾಗಿರುವವರು ಮತ್ತು ಯಾರು ನಿರ್ಗತಿಕರಿದ್ದಾರೆಯೋ ಇವರೆಲ್ಲರಿಗೂ ಸೇರಿಸಿ ಒಂದೇ ಕಾನೂನನ್ನು ತರುವುದಾದರೆ, ಇದನ್ನು ಸಂಪೂರ್ಣವಾಗಿ ವಿರೋಧ ಮಾಡಬೇಕಾಗುತ್ತದೆ. you have to come out with the facts. Facts ನಿಮ್ಮಲ್ಲಿ ಇದ್ದರೆ, ಉದಾಹರಣೆಗೆ ಯಾವುದಾದರೂ ಒಂದು ತಾಲ್ಲೂಕಿನ ಮಾಹಿತಿಯನ್ನು ದಯವಿಟ್ಟು ಇಲ್ಲಿ ಮಂಡನೆ ಮಾಡಿ. ಅದರ ಮೇಲೆ ವಾದ ಮಾಡೋಣ. ಹೆಗಡೆ ನಗರದಲ್ಲಿ ಸುಮಾರು 16,000 ಮನೆಗಳಿವೆ. ಇವರ ಫಾರ್ಮುಲಾ ಪ್ರಕಾರ 16,000 ಮನೆಗಳಲ್ಲಿ ನಾಳೆ ಬೆಳಿಗ್ಗೆ 10,000 ಮನೆಗಳನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರು ಒಡೆಯಬೇಕಾಗುತ್ತದೆ. ಇದು ಸಾಧ್ಯವಾಗುತ್ತದೆಯೇ? ಇದು ಎಂಥ ಸರ್ಕಾರ? ಇದು ಡೆಮಾಕ್ರಟಿಕ್ ಗೌರ್ನಮೆಂಟೇ? ಇದು ಡಿಕ್ಟೇಟರ್ ಗೌರ್ನಮೆಂಟ್ ಅಲ್ಲ. ನಿಮ್ಮ ಇಷ್ಟಾನುಸಾರ, ಸ್ವೇಚ್ಛಾನುಸಾರ, ಕಾನೂನುಗಳನ್ನು ತಂದು ಜಾರಿ ಮಾಡುತ್ತೇನೆಂದು ಹೇಳುತ್ತಿದ್ದೀರಿ. ಆದ್ದರಿಂದ, ಇದನ್ನು ನಾವು ವಿರೋಧ ಮಾಡುತ್ತೇವೆ. ಇದು ಅಂಕಿ–ಅಂಶಗಳು

ಇಲ್ಲದಂಥ ಬಿಲ್, ನಿಜವಾದ ವಾಸ್ತವ ಪರಿಸ್ಥಿತಿಯನ್ನು ಈ ಮನೆಗೆ ಮತ್ತು ರಾಜ್ಯಕ್ಕೆ ತಿಳಿಯಪಡಿಸುವುದಕ್ಕೆ ಆಗದೇ ಇರತಕ್ಕಂಥ ಬಿಲ್, ಬಡವರ ವಿರೋಧಿ ಬಿಲ್. ಇಂಥವರ ಒಂದು ಕ್ಯಾಟಗರೈಜೇಷನ್ ಮಾಡಿ, ಯಾರಾದರೂ ನಿಜವಾಗಿ ಇದರಲ್ಲಿ ದೊಡ್ಡ ದೊಡ್ಡ ಕುಳಗಳು ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿರುವವರ ಮೇಲೆ ಸಮಗ್ರವಾಗಿ ವಿಚಾರ ಮಾಡುವಂಥ ಒಂದು ಬಿಲ್ ತೆಗೆದುಕೊಂಡು ಬನ್ನಿ. ಅದಕ್ಕೆ ನಾವು ಬೇಕಾದರೆ ಒಪ್ಪಿಗೆ ಕೊಡೋಣ. ಏಕೆಂದರೆ ಬೇಕಾದಷ್ಟು ಜನ ಒತ್ತುವರಿ ಮಾಡಿಕೊಂಡಿರಬಹುದು. ಆದರೆ, 100 ಜನರ ಮೇಲೆ ಕ್ರಮತೆಗೆದುಕೊಳ್ಳುವಾಗ 10,000 ಜನರನ್ನು ನಾನು ಬಲಿಕೊಡುತ್ತೇನೆಂದು ಹೇಳತಕ್ಕಂಥ ವಾದಕ್ಕೆ ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇಷ್ಟು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಕುಮಾರ ಸ್ವಾಮಿ (ಮೂಡಿಗೆರೆ) :- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರದವರು ಎಲ್ಲರೂ ಮಾತನಾಡುತ್ತಾರೆ. ನಮ್ಮ ಭಾಗದಲ್ಲಿ ಕೂಡ ಬಹಳಷ್ಟು ಸಮಸ್ಯೆ ಇದೆ. ಬೆಂಗಳೂರು ಸುತ್ತಮುತ್ತ ಏನು ಭೂಕಬಳಿಕೆಯಾಗಿದೆ. ಆ ಭೂಗಳ್ಳರನ್ನು ಹಿಡಿಯುಲಿಕ್ಕೆ ಈ ಬಿಲ್ ತಂದಿರುವುದು ಅತ್ಯಂತ ಸ್ವಾಗತಾರ್ಹವಾದಂಥ ಸಂಗತಿ. ಆದರೆ ಗ್ರಾಮೀಣ ಭಾಗದಲ್ಲಿ ಅದರಲ್ಲೂ ನಮ್ಮ ಮಲೆನಾಡಿನ ಭಾಗದಲ್ಲಿ ಅನೇಕ ತೊಂದರೆಗಳು ಇವೆ. ನಮ್ಮ ಎಲ್ಲ ಸಮಸ್ಯೆಗಳನ್ನು ನಾವು ಹಲವಾರು ಸಾರಿ ಎತ್ತಬೇಕೆಂದರೆ ಅವಕಾಶ ಸಿಕ್ಕುತ್ತಿಲ್ಲ. ಇದು ಒಳ್ಳೆಯ ಬಿಲ್. ಇದನ್ನು ನಾವು ಸ್ವಾಗತಿಸುತ್ತೇವೆ. ಆದರೆ ನಮ್ಮಲ್ಲಿ ಹಲವಾರು ವರ್ಷಗಳಿಂದ ಅರಣ್ಯದಲ್ಲಿರುವ ಜಮೀನಿನಲ್ಲಿ ಅನುಭವ ಮಾಡಿಕೊಂಡಿರುತ್ತಾರೆ. ಇಂತಹವರನ್ನು ನೀವು ಈಗ ತಂದಿರುವ ಬಿಲ್ ಪ್ರಕಾರ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡುವುದು ಪ್ರವೇಶಿಸುವುದು ಒಂದು ಅಪರಾಧವೆಂದು ಅಂತಹವರಿಗೆ ಮೂರು ವರ್ಷಗಳ ಕಾರಾಗೃಹವಾಸ, ಮತ್ತು 10 ಸಾವಿರ ರೂ.ಗಳ ದಂಡ ಹಾಕಬೇಕೆಂದು ಮಾಡಿದ್ದೀರಿ, ತಲೆತಲಾಂತರದಿಂದ ಜಮೀನು ಸಾಗುವಳಿ ಮಾಡಿಕೊಂಡಿರುವವರು ಅವರು ಎಲ್ಲಿಗೆ ಹೋಗಬೇಕು. ಇವರನ್ನು ಒಕ್ಕಲೆಬ್ಬಿಸುವುದು ಬೇಡ. ಆದ್ದರಿಂದ ಈ ಬಿಲ್‌ನಲ್ಲಿರುವ ಈ ಕ್ಲಾಸ್ ನಮಗೆ ಅನ್ವಯಿಸಬಾರದು. ಅದನ್ನು ಬಿಟ್ಟು ಈ ಬಿಲ್ ತರಬೇಕೆಂದು ವಿನಂತಿಸುತ್ತೇನೆ.

(6 : 00 pm)

ಶ್ರೀ ಹೆಚ್. ಹಾಲಪ್ಪ (ಹೊಸನಗರ) :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಬಿಲ್‌ನ್ನು ಒಳ್ಳೆಯ ಉದ್ದೇಶ ಇಟ್ಟುಕೊಂಡು ತಂದಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಆದರೆ ಈಗ ಇರುವ ಕಂಡೀಷನ್‌ನಲ್ಲಿ ಮಲೆನಾಡಿನಲ್ಲಿರತಕ್ಕಂಥ ಹಳ್ಳಿಗಳನ್ನು exemption ಮಾಡದೇ ಇದ್ದರೆ ಇಲ್ಲಿಯ ರೈತರಿಗೆ ತೊಂದರೆಯಾಗುತ್ತದೆ. ಮಲೆನಾಡಿನಲ್ಲಿ ಹೇಗೆ ಇದ್ದಾರೆಂದರೆ, ಎರಡು-ಮೂರು ಎಕರೆ ಜಮೀನನ್ನು ಮಂಜೂರು ಮಾಡಿಸಿಕೊಂಡಿದ್ದಾರೆ. ಇನ್ನುಳಿದ 4, 5, 10 ಗುಂಟೆ ಮತ್ತು ಒಂದು--ಎರಡು ಎಕರೆಯವರೆಗೆ ಜಮೀನು ಮಂಜೂರು ಆಗಿಲ್ಲ. ಅದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಅಲ್ಲಿ ಅಡಿಕೆಯ ತೋಟವನ್ನು ಮಾಡಿಕೊಂಡಿದ್ದಾರೆ. ಅನೇಕ ಜನರ ಮನೆಗಳು ಅಲ್ಲಿವೆ. ಮಲೆನಾಡಿನಲ್ಲಿರತಕ್ಕಂಥ ಮನೆಗಳನ್ನು ನೀವು ಎಬ್ಬಿಸುತ್ತೀರಾ? ಈ ಬಿಲ್‌ನ ಉದ್ದೇಶ ಏನಿದೆ ಎಂದರೆ, ಬೆಂಗಳೂರಿನ ಸುತ್ತಮುತ್ತ ಅಕ್ರಮವಾಗಿ ಒತ್ತುವರಿ ಆಗಿರುವುದನ್ನು ತಡೆಗಟ್ಟುವುದಕ್ಕೆ ಮಾಡಿದ್ದೇವೆಂದು ಹೇಳಿದಿರಿ. ಅದು ಒಳ್ಳೆಯ ಉದ್ದೇಶ, ಅದನ್ನು ಮಾಡಿ. ಆದರೆ ಈ ಬಿಲ್‌ನಿಂದ ತೊಂದರೆ ಏನಾಗುತ್ತದೆಂದರೆ, ಮಲೆನಾಡಿನ ಹಳ್ಳಿಗಳಲ್ಲಿ ಒಂದೆರಡು ಮನೆಗಳು ಇರುತ್ತವೆ. ಅವರು ಜಮೀನು ಮಾಡಿಕೊಂಡಿರುತ್ತಾರೆ. ಮುಂದಿನ ದಿನಗಳಲ್ಲಿ ನಿಮ್ಮ ಅಧಿಕಾರಿಗಳು ಹೋಗಿ ಈ ಕಾನೂನನ್ನು ದುರುಪಯೋಗ ಮಾಡಿಕೊಂಡು ಅವರಿಗೆ ತೊಂದರೆ ಕೊಡುತ್ತಾರೆ. ಆದ್ದರಿಂದ ಅಷ್ಟೆ ಅಲ್ಲ, ಈ 50 ಮತ್ತು 53 ಫಾರಂನ್ನು ಹಾಕದಿರುವವರು ಇನ್ನು ನಮ್ಮ ಹಳ್ಳಿಗಾಡಿನಲ್ಲಿದ್ದಾರೆ. ಅವರಿಗೂ ಕೂಡ ಅವಕಾಶವನ್ನು ಮಾಡಿಕೊಡಬೇಕು. 30-40 ವರ್ಷದಿಂದ ನಾವು ಅಲ್ಲಲ್ಲಿ ತಲೆತಲಾಂತದಿಂದ ಅಲ್ಲಿ ಇದ್ದೇವೆ. ಅದು ಜಮೀನು ನಮ್ಮದು, ದಾಖಲಾತಿ ಮಾತ್ರ ಸರ್ಕಾರದ್ದು, ಅದು ಸರ್ಕಾರದ ಭೂಮಿ ಎಂದು ಹೇಳುತ್ತೀರಿ. ನಿಮ್ಮದು ಅದು ಅಲ್ಲವೇ ಅಲ್ಲ. ನಮ್ಮ ತಾತ ಮುತ್ತಾತನ ಕಾಲದಿಂದ ಇಲ್ಲಿ ಇದ್ದಾರೆ. ಆದ್ದರಿಂದ ಈ ಮಲೆನಾಡಿನ ಹಳ್ಳಿಗಳನ್ನು ಹೋಬಳಿ ಮಟ್ಟದಲ್ಲಿಯಾದರೂ ಅವುಗಳನ್ನು ಬಿಡಬೇಕು. ಬೆಂಗಳೂರು, ಮೈಸೂರು ಮಾಡಿ, ಜಿಲ್ಲಾ Head Quarteers ಗಳ ಸುತ್ತಮುತ್ತ ಬೇಕಾದರೆ ಈ ಕಾನೂನನ್ನು ಮಾಡಿ. ಹಳ್ಳಿಗಳಿಗೆ exemption ನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಕೆ. ಬೋಪಯ್ಯ (ಮಡಿಕೇರಿ) :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಬಿಲ್‌ನ್ನು ಏನು ತಂದಿದ್ದಾರೆ. ನಾನು ಈ ಬಿಲ್‌ನ್ನು ಸ್ವಾಗತಿಸುತ್ತೇನೆ. ಕೊಡಗು

ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಇವತ್ತು ತಿದ್ದುಪಡಿಯನ್ನು ತಂದು, ಕೊಡಗು ಜಿಲ್ಲೆಯಲ್ಲಿ ಕೇವಲ ಪಾಣೆ ಜಮಾ ಅಲ್ಲ, ಒಟ್ಟು 32 tenures ಇದೆ. ಆ 32 tenures ನಲ್ಲಿ ದೇವರ ಕಾಡು ಮತ್ತು 3 ಮಂದಿ, ಇದಕ್ಕೆ ಇರುವ ಕಾಯಿದೆಯಲ್ಲಿ ಸರ್ಕಾರಿ ಜಮೀನು ಎಂದು ಹೇಳುವುದಕ್ಕೆ ಅವಕಾಶವಿದೆ. ಜಮ್ಮಾ ಮತ್ತು ಇತರ Similar Characteristic tenures ಅಷ್ಟು ಜುಮ್ಮಾ ಎಂದು ಹೇಳುವಂಥದ್ದನ್ನು ಸೇರಿಸಬೇಕು ಎನ್ನುವಂಥದ್ದು ನನ್ನ ಒತ್ತಾಯ. 32 tenures ಇದೆ ಸ್ವಾಮಿ. ಎಲ್ಲವೂ Similar Characteristic Jamma ಅದನ್ನು ಸೇರಿಸಬೇಕೆಂದು ಹೇಳುವಂಥದ್ದು ನನ್ನ ಒತ್ತಾಯ ಇದೆ. ಅದರ ಜೊತೆಗೆ ಇದರಲ್ಲಿ English ನಲ್ಲಿ ಕೂರ್ಗ್ ಡಿಸ್ಟ್ರಿಕ್ಟ್ ಎಂದು ಹೇಳಿದ್ದಾರೆ. ಅದು ಕೊಡಗು ಜಿಲ್ಲೆಯಾಗಿದೆ. ಬ್ರಿಟೀಷರು ಕೂರ್ಗ್ ಡಿಸ್ಟ್ರಿಕ್ಟ್ ಎಂದು ಹೇಳಿ ಇವತ್ತು revenue regulation ಎಂದು ಎಲ್ಲಾ ಮಾಡಿದ್ದರ ಅದರ ಶಾಪವನ್ನು ನಾವು ಇವತ್ತಿಗೂ ಅನುಭವಿಸಿದ್ದೇವೆ. ಆ ಕೂರ್ಗ್ ಎನ್ನುವುದನ್ನು ತೆಗೆದು ಕೊಡಗು ಎಂದು ಮಾಡಬೇಕು. ಇದಿಷ್ಟು ನನ್ನ ಬೇಡಿಕೆ ಇದೆ. ಅದರ ಜೊತೆಗೆ ಇವತ್ತು ಈ ಒಂದು apprehension ವ್ಯಕ್ತಪಡಿಸಿದ್ದಾರೆ. ಆದರೆ offence ನಲ್ಲಿ ಬಹಳ ಕ್ಲಿಯರ್‌ಆಗಿ ಹೇಳಿದ್ದಾರೆ. "Unlawfully enters or occupies on any Government land with the intention of holding that Government land, Cheats and thereby dishonestly creates documents for the purpose of selling, mortgaging or transferring by gift or otherwise of any Government land" ಈ Act ನಲ್ಲಿ ಇವರು ಹೇಳಿದ ತರಹ ಯಾರೋ ಒಬ್ಬ ನಿರಪರಾಧಿ ತನಗೆ ಗೊತ್ತಿಲ್ಲದೇ ಅನೇಕ ವರ್ಷಗಳಿಂದ ವಾಸವಾಗಿದ್ದಾರೆ. ಅಥವಾ ಕೃಷಿ ಮಾಡುತ್ತಿದ್ದಾರೆ, ಅದಕ್ಕೇನು ಇದರಲ್ಲಿ ಬರುವುದಿಲ್ಲ, The intention is very clear. What is the intention ? ಅದನ್ನು ಈ Act ನಲ್ಲೇ mention ಮಾಡಿದ್ದಾರೆ. ಯಾವ ಉದ್ದೇಶದಿಂದ ಸರ್ಕಾರಿ ಭೂಮಿಗೆ ಇವರು ಹೋಗುತ್ತಿದ್ದಾರೆ. "The intention of cheating or creating any forged documents for the purpose of selling" ಇದು punishment ನಲ್ಲಿ ಇರುವಂಥದ್ದು. ಹಾಗಾಗಿ ಅನೇಕ ವರ್ಷಗಳಿಂದ ಇರುವಂಥವರು ಅಥವಾ ಕೃಷಿ ಮಾಡುತ್ತಿರುವವರಿಗೆ ನೇರವಾಗಿ ಈ ಕಾಯಿದೆ apply ಆಗುವುದಿಲ್ಲ ಎನ್ನುವುದು ಇದನ್ನು ಓದಿದಾಗ ಭಾವನೆಯಾಗುತ್ತದೆ. ಹಾಗಾಗಿ ಇವತ್ತು ನನಗೆ ಏನು ಅನ್ನಿಸುತ್ತದೆ, ಅದನ್ನು ನಾನು ಹೇಳಬೇಕು. ಒಂದು

ತರದ apprehension ಈ ಕಾಯಿದೆಯಲ್ಲಿ ಇದೆ. ಹಾಗಾಗಿ ಈ ಕಾಯಿದೆ ಸದುದ್ದೇಶದಿಂದ ಇದೆ. ಆದರೆ ಮತ್ತೊಮ್ಮೆ ತಮ್ಮಲ್ಲಿ ನನ್ನ ವಿನಂತಿ ಇದೆ. ಆ 32 tenures ನ್ನು ಸೇರಿಸಿ ಈ ತಿದ್ದುಪಡಿಯನ್ನು ಮಾಡಬೇಕು. ಕೂರ್ಗ್ ಇರುವಂಥದ್ದನ್ನು ಕೊಡಗು ಎಂದು ಮಾಡಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ ಹಾಗೂ ನಾನು ಈ ಬಿಲ್‌ನ್ನು ಸ್ವಾಗತಿಸುತ್ತೇನೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು, ಸರ್ಕಾರಿ ಭೂಮಿ ಕಬಳಿಕೆಯಾಗಿದೆ. ಈ ಕಬಳಿಕೆಯನ್ನು ಯಾವ ಹಂತಕ್ಕೆ ಇದನ್ನು ನಿಯಂತ್ರಣ ಮಾಡಬೇಕು ಎನ್ನುವ ಒಂದು ಬಿಲ್‌ನ್ನು ತರುವ ಸಂದರ್ಭದಲ್ಲಿ ಸರ್ಕಾರಿ ಭೂಮಿಯನ್ನು ಕಬಳಿಕೆ ಮಾಡಿರತಕ್ಕಂಥದ್ದು ಅಕ್ರಮ ಅಪರಾಧ. ಅದರ ಬಗ್ಗೆ ಏನು ಕಾನೂನು ತರಬೇಕು, ಅದರ ಬಗ್ಗೆ ನಮ್ಮ ಅಭ್ಯಂತರವೇನಿಲ್ಲ. ಆದರೆ ಕೆಲವೊಂದು ಕಡೆ ಇವತ್ತು ಸರ್ಕಾರಿ ಭೂಮಿಯನ್ನು ಹೊರತುಪಡಿಸಿ ಬೇರೆ ಬೇರೆ ಏನು ಇದೆ. ಇವತ್ತು ಈ ರೀತಿಯಾಗಿ ಸರ್ಕಾರಿ ಭೂಮಿ 18 ಸಾವಿರ ಎಕರೆ ಎಂದು ಹೇಳಿದರು. ಅದರೊಳಗೆ ಸ್ಮಶಾನವನ್ನು ಯಾರು ಒತ್ತುವರಿ ಮಾಡಿಕೊಂಡಿದ್ದಾರೆ, ಬೇರೆ ಬೇರೆ ಜಮೀನನ್ನು ಯಾರು ಒತ್ತುವರಿ ಮಾಡಿಕೊಂಡಿದ್ದಾರೆ, ಇವೆಲ್ಲವುಗಳ ಪಟ್ಟಿ ಮಾಡಿಕೊಟ್ಟರೆ ಅದು ಒಳ್ಳೆಯದು. ಅದು ಒಂದು ಇರಲಿ ಇಲ್ಲಿ ಏನಾಗಿದೆ, ಇವತ್ತು ನಮ್ಮ ಮಿತ್ರರಾದ ಶಿವಮೊಗ್ಗ ಜಿಲ್ಲೆಯ ಶಾಸಕರು ಮಾತನಾಡುತ್ತಾ ಹೇಳಿದರು. ಬೆಂಗಳೂರು ನಗರದಲ್ಲಿರತಕ್ಕಂಥವರೆಲ್ಲರೂ ಕೂಡ ಭೂಮಾಫಿಯಾದಲ್ಲಿ involve ಆಗಿದ್ದಾರೆಂದು ಹೇಳಿದರು, ಅದು ತಪ್ಪು. ದಯಮಾಡಿ ಕ್ಷಮಿಸಬೇಕು. ಅವರು ಕೂಡ ಬೆಂಗಳೂರಿನಲ್ಲಿಯೇ ವಾಸ ಮಾಡುತ್ತಾರೆ. ಕರ್ನಾಟಕದ ರಾಜಧಾನಿ ಬೆಂಗಳೂರು ನಗರದಲ್ಲಿ ಯಾರು ಇದ್ದಾರೆ, ಯಾರು ಇಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ಅವರವರ ಆತ್ಮಶೋಧನೆಯನ್ನು ಅವರು ಮಾಡಿಕೊಳ್ಳಬೇಕಾಗುತ್ತದೆ. ಆದರೆ ಎಲ್ಲೋ ಒಂದು ಕಡೆ, ಮಾನ್ಯ ಕಂದಾಯ ಸಚಿವರು, ಈಗ ಮಾನ್ಯ ಧರ್ಮಸಿಂಗ್ ಸಾಹೇಬರು ಕುಳಿತಂಥ ಜಾಗದಲ್ಲಿ ಕುಳಿತು ತಾವು ಏನೇನು ಮಾತನಾಡಿದ್ದೀರಿ ಎನ್ನುವುದರ ಬಗ್ಗೆ ನಾವು ತರಿಸಿದ್ದೇವೆ. ಸರ್ಕಾರಿ ಭೂಮಿಯನ್ನು ಕಬಳಿಕೆ ಮಾಡಿರತಕ್ಕಂಥ ಯಾವುದೇ ಒಬ್ಬ ದೊಡ್ಡ ವ್ಯಕ್ತಿಗೂ ಕೂಡ ನಾವ್ಯಾರು ರಕ್ಷಣೆ ಕೊಡುವಂಥ ಒಂದು ಸಂದರ್ಭ ಇಲ್ಲಿ ಇಲ್ಲ. ನಮಗೆ ಅದರ ಅವಶ್ಯಕತೆ ಕೂಡ ಇಲ್ಲ. ಅಂಥವರ ಮೇಲೆ ನಾವು ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ನಮ್ಮ ಅಭ್ಯಂತರವೇನು ಇಲ್ಲ. ಮಾನ್ಯ

ಮಾಧೂಸ್ವಾಮಿಯವರು ಮಾತನಾಡುತ್ತಾ, ಕೆಲವೊಂದು ಸೂಕ್ಷ್ಮವಾದ ವಿಚಾರಗಳನ್ನು ಹೇಳಿದರು. ಆದ್ದರಿಂದ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೋಸ್ಕರವಾಗಿ ಮಾಡಿರತಕ್ಕಂಥವರಿಗೂ ಕೂಡ, ಕೃಷಿ ಭೂಮಿ ಯಾರದು? ಅದು ಒಬ್ಬ ರೈತನದು. ಕೆಂಪೇಗೌಡನ ಕನಸಿನ ಈ ಬೆಂಗಳೂರು ನಾಲ್ಕು ಕಡೆ ನಾಲ್ಕು ಗೋಪುರಗಳನ್ನು ಕಟ್ಟಿದರು. ಇವತ್ತು ಆ ಗೋಪುರ ಏನಾಗಿದೆ. ಅಲ್ಲಿಂದ 4--5 ಪಟ್ಟು, ಅದು ಆದ ಮೇಲೆ 240 ಚ.ಕಿ.ಮೀ. ಇದ್ದದ್ದು 800 ಚ.ಕಿ.ಮೀ. ಗೆ ನಾವು ತೆಗೆದುಕೊಂಡು ಹೋಗಿದ್ದೇವೆ. ಇಲ್ಲಿ ಸರ್ಕಾರಿ ಜಮೀನು ಏನಿದೆ, ಇದೆಲ್ಲವನ್ನು ಗುರುತಿಸಿ ತಾವು ಏನಾದರೊಂದು ಮಾನದಂಡವನ್ನು ಉಪಯೋಗಿಸಿ ಮಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಹಳ್ಳಿಗಳಲ್ಲಿ ಏನು ವಾಸ ಮಾಡುತ್ತಿದ್ದಾರೆ, ಅದೇ ರೀತಿಯಾಗಿ ಬೆಂಗಳೂರು ನಗರದಲ್ಲಿ ಸುಮಾರು ವರ್ಷಗಳಿಂದ ವಾಸ ಮಾಡತಕ್ಕಂಥವರೂ ಇದ್ದಾರೆ. 1980 ರಿಂದ ಈಚೆಗೆ 1994 ರವರೆಗೆ 14 ವರ್ಷದವರೆಗೆ ಒಂದು ತರಹ ಇತ್ತು. 1994 ರಿಂದ 2004 ರವರೆಗೆ ಒಂದು ತರಹ ಇತ್ತು. 2004 ರಿಂದ ಈಚೆಗೆ ಬೆಂಗಳೂರು ನಗರದಲ್ಲಿ ಅಷ್ಟೇ ಅಲ್ಲ, ಇಡೀ ವಿಶ್ವದಲ್ಲಿಯೇ ಕೂಡ, ರಾಜ್ಯದ ದೊಡ್ಡ ದೊಡ್ಡ ನಗರಗಳಲ್ಲಿ ಭೂಮಿಯ ಬೆಲೆ ಜಾಸ್ತಿಯಾದಾಗ ಎಲ್ಲೋ ಒಂದು ಕಡೆ ಅತಿಕ್ರಮಣಗಳು ನಡೆದಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದು ಏನು ಇವತ್ತು ಸದನ ಸಮಿತಿಯನ್ನು ನೇಮಕ ಮಾಡಿ ಇದೊಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಇದರ ಬಗ್ಗೆ ನಮ್ಮದೇನು ತಕರಾರು ಇಲ್ಲ. ತಾವು ಮಾಡತಕ್ಕಂಥ ಒಳ್ಳೆಯ ಕೆಲಸಕ್ಕೆ ನಮ್ಮ ಸಹಮತ ಇದೆ. ಆದರೆ ತಾವು ಇಲ್ಲಿ ಏನು ಹೇಳುತ್ತೀರಿ. " ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಅಂತಹ ಭೂಮಿಯನ್ನು ಪರಿವರ್ತಿಸದೇ ಅಥವಾ ಸಕ್ರಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೇ ಮಾರಾಟ ಮಾಡುವುದು, ಮೂರು ವರ್ಷಗಳ ಕಾರಾಗೃಹವಾಸ ಮತ್ತು 10 ಸಾವಿರ ರೂ.ಗಳ ಜುಲ್ಮಾನೆ" ಎಂದು ಹೇಳುತ್ತೀರಿ. ಬೆಂಗಳೂರು ನಗರದಲ್ಲಿ ಈಗಾಗಲೇ ನಾವು 1994 ರಲ್ಲಿ ಏನು 20'x 30', 30' x 40', 40'x 60' ರಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರು. ಈ ರೆವಿನ್ಯೂ ಪಾಕೇಟುಗಳೆಲ್ಲವನ್ನು ಸಕ್ರಮಗೊಳಿಸಿ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, BMRDA ಯಲ್ಲಿ ಇವತ್ತು ಸುಮಾರು 400–500 ಕೋಟಿ ರೂ.ಗಳನ್ನು ಈಗಾಗಲೇ ವಾಸ ಮಾಡತಕ್ಕಂಥ ಜನರೂ ದುಡ್ಡನ್ನು ಕಟ್ಟಿದ್ದಾರೆ. ಅವರಿಗೆ ಏನು ಮಾಡುತ್ತೀರಿ? ಇಲ್ಲಿ ತಾವು ಏನು ಹೇಳುತ್ತೀರಿ, ಪರಂತು ಈ ಸಂಬಂಧ ವಿಶೇಷ ಯೋಜನೆಯನ್ನು ರೂಪಿಸುವ

ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳು ಇಲ್ಲಿ ಅನ್ವಯವಾಗತಕ್ಕದಲ್ಲ. ನಾವು ಎಲ್ಲಿಯೂ ಕೂಡ ಸಕ್ರಮ ಮಾಡಿರುವುದಿಲ್ಲ. ನಾವೇನು ಮಾಡಿದ್ದೇವೆ. ಎಲ್ಲೆಲ್ಲಿ ರೆವಿನ್ಯೂ ಪಾಕೇಟ್‌ಗಳು ಇತ್ತು, ಬೆಂಗಳೂರು ನಗರದ ಹೃದಯ ಭಾಗದಲ್ಲೂ ಕೂಡ ರೆವಿನ್ಯೂ ಪಾಕೆಟ್ ಇದೆ. ಸುಂಕೇನಹಳ್ಳಿಯಲ್ಲಿ ರೆವಿನ್ಯೂ ಪಾಕೆಟ್ ಇದೆ. ವಿಜಯನಗರದ ಬಿಡಿಎ ಲೇಔಟ್ ಬಿಟ್ಟರೆ ಬಾಕಿ ಎಲ್ಲವೂ ರೆವಿನ್ಯೂ ಪಾಕೆಟ್ ಇದೆ. ಮಡಿವಾಳ ರೆವಿನ್ಯೂ ಪಾಕೆಟ್, ಬೆಂಗಳೂರಿನಲ್ಲಿರುವಂತಹ ಬಹುತೇಕ ಭಾಗಗಳು ರೆವಿನ್ಯೂ ಪಾಕೆಟ್‌ಗಳಾಗಿದೆ. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಒಂದೆರಡು ಮನೆಗಳಲ್ಲ, ಲಕ್ಷಾಂತರ ಮನೆಗಳಿಗೆ ಇದು ಅನ್ವಯವಾಗುತ್ತದೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ದಯಮಾಡಿ ತಾವು ಈ ಸರ್ಕಾರಿ ಭೂಮಿ ಏನಿದೆ, ಅದನ್ನು ಯಾರಾದರೂ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದರೆ, ಅಂತಹವರ ಮೇಲೆ ತಾವು ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಆದರೆ ತಾವು ದಯಮಾಡಿ ಮಾಡುವಾಗ ಸನ್ಮಾನ್ಯ ಶ್ರೀ ಎ.ಟಿ. ರಾಮಸ್ವಾಮಿಯವರ ಸಮಿತಿಯು ಏನು ವರದಿಯನ್ನು ಕೊಟ್ಟಿದೆ, ಅದರ ಬಗ್ಗೆ ನಮ್ಮಗಳ ಅಭ್ಯಂತರವಿಲ್ಲ. ಆದರೆ ತಾವು ಏನು ಮಾಡುತ್ತಿದ್ದೀರಿ, ನಿಮ್ಮ 192 (ಎ) ನಲ್ಲಿ ರೂಲ್ ಕ್ರಮಸಂಖ್ಯೆ 5 ಮತ್ತು 6, ಈ 5 ರಲ್ಲಿ ಕೃಷಿ ಭೂಮಿಯ ಬಗ್ಗೆ ಈಗಾಗಲೇ ಹೇಳಿದ್ದೇನೆ. ಕ್ರಸಂ. 6 ರಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗಾಗಿ ಪರಿವರ್ತಿಸಿದ ಬಗ್ಗೆ ಖೋಟಾ ದಾಖಲೆಗಳನ್ನು ಸೃಷ್ಟಿ ಮಾಡಿರುವಂಥವರ ಬಗ್ಗೆ ಕೃಷಿ ಸಚಿವರು ಯಾವ ಕ್ರಮಗಳನ್ನು ಬೇಕಾದರೆ ತೆಗೆದುಕೊಳ್ಳಿ, ನಾವೇನೂ ಬೇಡವೆನ್ನುವುದಿಲ್ಲ. ಅದರ ಬಗ್ಗೆ ನಾವು ಏನು ಚಿಂತೆ ಮಾಡುವುದಿಲ್ಲ. ಆದರೆ, ಕೃಷಿ ಭೂಮಿಯನ್ನು ಹೊಂದಿರುವರು ಅದನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸುತ್ತಿದ್ದಾರೆಂದು ಪ್ರಾಧಿಕರಿಸುವುದು. ಇಂತಹುಗಳು ನೂರಾರು ಪ್ರಕರಣಗಳು ಇವೆ. ಅವರುಗಳು ಸ್ವಂತ ಭೂಮಿಯಲ್ಲಿ ಮಾಡಿಕೊಂಡಿದ್ದಾರೆ. ಇಂತಹುಗಳು ಸಾವಿರಾರು, ಲಕ್ಷಾಂತರ ಪ್ರಕರಣಗಳು ಇವೆ, ಈ ಬಗ್ಗೆ ತಾವು ಏನು ಮಾಡುತ್ತೀರಿ. ಇನ್ನು ಒಂದು ಮಾತನ್ನು ತಾವು ಹೇಳುತ್ತೀರಿ, ದಾಖಲೆಗಳನ್ನು ನಿರ್ಮಿಸುವ, ಸಾರ್ವಜನಿಕ ನೌಕರನಾಗಿದ್ದು ಹೊಣೆಗಾರಿಕೆ ಹೊತ್ತಿದ್ದು, ರೆವಿನ್ಯೂ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಕಾನೂನು ಬಾಹಿರವಾಗಿ ಪರಿವರ್ತಿಸಿರುವುದನ್ನು ಸಕ್ಷಮ ಪ್ರಾಧಿಕಾರಿಗೆ ವರದಿ ಮಾಡಲು ಅಥವಾ ಆ ಬಗ್ಗೆ ಕ್ರಮ ಕೈಗೊಳ್ಳಲು ತಪ್ಪುವುದು. ಇದನ್ನು ಮಾಡಿರತಕ್ಕಂಥವರು ಯಾವುದೋ ಒಬ್ಬ ರೈತ ತಪ್ಪು ಮಾಡಿಲ್ಲ. ಏನಾಯಿತು, ಬೆಂಗಳೂರಿನಲ್ಲಿ ಸುಮಾರು 40 ವರ್ಷಗಳಿಂದ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಸಿಐಟಿಬಿ ಇದ್ದಾಗ ಮಾಡಿರುವಂತಹ ಅನೇಕ ಯೋಜನೆಗಳಲ್ಲಿ 20 ಎಕರೆ ತೆಗೆದುಕೊಂಡು ಇನ್ನೊಂದು 10 ಎಕರೆ ಬಿಟ್ಟಿತು, 30 ಎಕರೆಯನ್ನು ತೆಗೆದುಕೊಂಡರು ಇನ್ನು 50 ಎಕರೆಯನ್ನು ಬಿಟ್ಟರು. ಏನಾಯಿತು 30 ಎಕರೆ ಎಂದರೆ, ಪಕ್ಕದಲ್ಲಿರುವಂತಹ ರೆವಿನ್ಯೂ ಪಾಕೆಟ್‌ಗಳನ್ನು ಏನು ಮಾಡಿದರು ಎಂದರೆ ಅವುಗಳನ್ನು ಮಾರಿಕೊಂಡರು. 20'x 30', 30' x 40', 40'x 60' ಎಂದು ಸೈಟುಗಳನ್ನು ಮಾಡಿ ಮಾರಿಕೊಂಡಿದ್ದಾರೆ. ಸನ್ಮಾನ್ಯ ರೆವಿನ್ಯೂ ಸಚಿವರು ದಯಮಾಡಿ ಈ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಯಾವ ರೀತಿಯಾಗಿ ಆಗುತ್ತದೆಯೋ ಬೆಂಗಳೂರಿನ ಅರ್ಧಭಾಗಕ್ಕಿಂತ ಮೇಲ್ಪಟ್ಟು ನೀವು ಒಡೆಯಬೇಕಾಗುತ್ತದೆ. ನಾವು ಈಗಾಗಲೇ ಸಕ್ರಮಗೊಳಿಸುವ ಬಗ್ಗೆ ಕಾನೂನನ್ನು ತರುತ್ತಿದ್ದೇವೆ. 30 ವರ್ಷಗಳಿಂದ ಮಾಡಿರುವಂತಹ ಬಹುತೇಕ ಬಿಡಿಎ ಬಡಾವಣೆಗಳಲ್ಲಿ ಪಕ್ಕದಲ್ಲಿರುವಂತಹವರು ಎಷ್ಟು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಏನೇನು ಆಗಿದೆ ಎಂಬುದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. ದಯಮಾಡಿ ತಾವು ಇದನ್ನು ತೆಗೆಯುವುದು ಸೂಕ್ತವೆಂದು ನಾನು ಹೇಳುತ್ತೇನೆ. ದಯಮಾಡಿ ತಾವು ಇದನ್ನು ಬರೆದುಕೊಳ್ಳಬೇಕಾಗುತ್ತದೆ. ನಾನು ಸನ್ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಏನು ನಿಮ್ಮ ಕ್ರಮಸಂಖ್ಯೆ 5 ಮತ್ತು 6 ರಲ್ಲಿ ಅಥವಾ ಎನ್ನುವುದರಿಂದ ಹಿಡಿದು ಕೊನೆಯ ಪ್ಯಾರಾವಾಗಿರುವಂತಹದ್ದು, ಮತ್ತೆ ಈ " ಪರಂತು ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದಲ್ಲ" ಇದನ್ನು ತಾವು ದಯಮಾಡಿ ತೆಗೆದುಹಾಕಿ, ನನಗೆ ತಿಳಿದಮಟ್ಟಿಗೆ ತಾವು ಒಂದನ್ನು ಮಾಡಬಹುದು. ಸನ್ಮಾನ್ಯ ಕೃಷ್ಣಪ್ಪನವರು ಒಂದು ಮಾತನ್ನು ಹೇಳಿದರು. ಬೆಂಗಳೂರು ನಗರದಲ್ಲಿ ಆಶ್ರಯ ಸಮಿತಿ ಇಲ್ಲ. ಆಶ್ರಯ ಸಮಿತಿ ಇದ್ದರೂ ಕೂಡ ನಾವು ಸೈಟು ಕೊಡುವ ಪರಿಸ್ಥಿತಿಯಿರಲಿಲ್ಲ. ಸರ್ಕಾರದ ಜಾಗವನ್ನು ಬಿಟ್ಟರೆ ಯಾವುದೂ ಕೂಡ ಇಲ್ಲ. ಯಾವುದಾದರೂ ಒಂದನ್ನು ತೆಗೆದುಕೊಂಡು ಕೊಡೋಣವೆಂದರೆ 20–30 ವರ್ಷಗಳು ಕೂಡ ಆಗಿದೆ. ಆದರೆ ಎಲ್ಲೋ ಒಂದು ಕಡೆಯಲ್ಲಿ ಈಗಾಗಲೇ ನಾವು Slum Clarence Board ನ ಕೆಲವರಿಗೆ Possession certificate ನ್ನು ಕೊಟ್ಟಿದ್ದೇವೆ. ಅಂತಹ Slum ಗಳ ಬಗ್ಗೆಯೂ ಕೂಡ ಮಾನ್ಯ ಕಾನೂನು ಸಚಿವರು ಒಂದು ಕಾನೂನನ್ನು ತರುತ್ತಿದ್ದಾರೆ. ಆ ಬಗ್ಗೆ ನಾವು ನಂತರ ಮಾತನಾಡುತ್ತೇವೆ. ಆದರೆ ತಾವು ಒಂದು ವಿಚಾರದ ಬಗ್ಗೆ ಮಾತನಾಡಬೇಕಾಗಿದೆ. ತಾವು ಮಾನವೀಯತೆ

ದೃಷ್ಟಿಯನ್ನು ಮನಸ್ಸಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ನೂರಾರು ಎಕರೆಯನ್ನು ಮಾಡಿರುವಂತಹವರು ಒಂದು – ಎರಡು ಎಕರೆಯನ್ನು ಮಾಡಿರುವಂತಹವರು ಯಾರು ಇದ್ದಾರೆ, ಅವರೆಲ್ಲರ ಮೇಲೆ ಮುಲಾಜು ಇಲ್ಲದೇ ಕ್ರಮವನ್ನು ತೆಗೆದುಕೊಳ್ಳಿ. ಆದರೆ ತನ್ನ ಸ್ವಂತ ಜಮೀನಿನಲ್ಲಿ ಎಲ್ಲೋ ಒಂದು ಕಡೆಯಲ್ಲಿ ಯಾವುದೋ ಕಾಲದಲ್ಲಿ 2000, 3000, 5000, 10,000 ರೂಪಾಯಿಗಳಿಗೆ ತೆಗೆದುಕೊಂಡವರು ಅವರುಗಳಿಗೆ ಮನೆಯನ್ನು ಕಟ್ಟಿಕೊಂಡಿದ್ದಾರೆಂದರೆ, ಮೊನ್ನೆ ದಿನ ನಮ್ಮ ನಾಯಕರಾದ ಶ್ರೀ ಎನ್. ಧರ್ಮಸಿಂಗ್‌ರವರು ಉತ್ತರಹಳ್ಳಿ ಕ್ಷೇತ್ರದಲ್ಲಿ ಹೋದಾಗ ಅಲ್ಲಿ ಸುಮಾರು 400–500 ಮನೆಗಳನ್ನು ಒಡೆದುಹಾಕಿದ್ದರು. ಅದರ ಪಕ್ಕದಲ್ಲಿ ಬಿಡಿಎ ಇದೆ, ಮಾನ್ಯ ಕಂದಾಯ ಸಚಿವರೆ, ಬಿಡಿಎ ಪಕ್ಕದಲ್ಲಿರುವಂತಹ 5–3 ಎಕರೆ ಹಾಗೆಯೇ ಇದ್ದು 30–35 ವರ್ಷದಲ್ಲೋ ಅದು ಅದು ಅಕ್ವಿಜಿಷನ್ ಆಯಿತು. ಅಲ್ಲಿ ಅವರುಗಳು ಮನೆಯನ್ನು ಕಟ್ಟಿಕೊಂಡರು, ಕೆಲವು ಮನೆಗಳನ್ನು ಒಡೆದುಹಾಕಿದರು, ಕೊನೆಗೆ ಕೆಲವು ಮನೆಗಳನ್ನು ಒಡೆದುಹಾಕುವುದು ನಿಂತಿತು. ಈಗಾಗಲೇ ನನಗೆ ತಿಳಿದಮಟ್ಟಿಗೆ ಮಾನ್ಯ ಎ.ಟಿ. ರಾಮಸ್ವಾಮಿಯವರ ಸಮಿತಿಯವರು ಕೂಡ ಅಂತಹುಗಳನ್ನು regularize ಮಾಡಬೇಕೆಂಬ ಬಗ್ಗೆ ವರದಿಯನ್ನು ಕೂಡ ಕೊಡುತ್ತಿದ್ದಾರೆ.

ಉಪಾಧ್ಯಕ್ಷರು :– ಈ ತರಹ ಡಿಟೇಲ್ ಆಗಿ ಚರ್ಚೆ ಮಾಡುತ್ತಾ ಹೋದರೆ ಹೇಗೆ?

ಶ್ರೀ ವಿ. ಸೋಮಣ್ಣ :– ಇದು ಭಾರಿ ಸೂಕ್ಷ್ಮವಾದುದು, ಇದು ತಮಗೆ ಅನ್ವಯವಾಗುತ್ತದೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ನಾವು ಏನು ಇಲ್ಲಿ ಸರ್ಕಾರಿ ಭೂಮಿ ಒಂದಿಂಚು ಇದ್ದರೂ ಕೂಡ ದಯವಿಟ್ಟು ಕಾನೂನು ಪ್ರಕಾರವಾಗಿ ಕ್ರಮವನ್ನು ತೆಗೆದುಕೊಳ್ಳಿ. ಆದರೆ ಎಲ್ಲೋ ಒಂದು ಕಡೆ ಮಾನವೀಯತೆಯ ದೃಷ್ಟಿಯಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರವಾಗಿ ಮನೆಯನ್ನು ಕಟ್ಟಿಕೊಂಡಿರುವವರನ್ನು ನೀವು ಒಡೆದು ಹಾಕುತ್ತೇವೆಂದರೆ, ಅದು ಎಲ್ಲಿಂದ ಸಾಧ್ಯವಿದೆ. 400–500 ಕೋಟಿ ರೂಪಾಯಿಗಳು ಬೆಂಗಳೂರಿನಲ್ಲಿ ಬಿಡಿಎದವರು, ಬೆಂಗಳೂರು ಮಹಾನಗರಪಾಲಿಕೆಯವರು ಕಲೆಕ್ಟ್ ಮಾಡಿದ್ದಾರೆ. ಅವರೆಲ್ಲರಿಗೂ ಖಾತೆ ಮತ್ತು ಕಂದಾಯಗಳನ್ನು ಮಾಡಿಕೊಟ್ಟಿದ್ದಾರೆ. ರಸ್ತೆಯನ್ನು ಮಾಡಿದ್ದೇವೆ, ಒಳಚರಂಡಿಯನ್ನು ಸಹ ಮಾಡಿದ್ದೇವೆ. ಲೈಟ್ ಹಾಗೂ ಕುಡಿಯುವ ನೀರನ್ನು ಸಹ ಒದಗಿಸಿದ್ದೇವೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುವುದೇನೆಂದರೆ, ಏನು ಈಗಾಗಲೇ ಸಮಿತಿಯವರು ಕೊಟ್ಟಿರುವಂತಹ ರಿಪೋರ್ಟ್ ಏನಿದೆ, ಸನ್ಮಾನ್ಯ ಎ.ಟಿ. ರಾಮಸ್ವಾಮಿವರ

ಅವರ ಮುಖಂಡತ್ವದಲ್ಲಿ ಅದರ ಬಗ್ಗೆ ನೀವು ಏನು ಬೇಕಾದರೂ ಕ್ರಮವನ್ನು ತೆಗೆದುಕೊಳ್ಳಿ. ಆದರೆ ಕೃಷಿಯೇತರ ಭೂಮಿಗಳನ್ನು 1927–28 ರಲ್ಲಿ ಅವತ್ತಿನ ದಿವಸ ಮಿರ್ಜಾ ಇಸ್ಮಾಯಿಲ್‌ರವರು ಕೊಟ್ಟಿರುವಂತಹ ಹಳ್ಳಿಗಾಡಿನ ಜನರಿಗೂ ಕೂಡ ಇದು ಅನ್ವಯವಾಗುತ್ತದೆ. ಅವತ್ತಿನಿಂದ ಇವತ್ತಿನವರೆಗೂ ಕೂಡ ಅವರು ಮಾಡುತ್ತಿದ್ದಾರೆ. ಅವರಿಗೆ ಏನೇನೂ ಕಾನೂನು ಇಲ್ಲ. ಬೆಂಗಳೂರು ನಗರದ ಸುತ್ತಮುತ್ತ, ಬೆಂಗಳೂರು ಹಾಗೂ ಮೈಸೂರು ನಗರವಿರಬಹುದು, ತುಮಕೂರು ಹಾಗೂ ಮಂಡ್ಯ ಇರಬಹುದು, ಹುಬ್ಬಳ್ಳಿ–ಧಾರವಾಡ ಇರಬಹುದು, ಗುಲ್ಬರ್ಗಾ ಮತ್ತು ರಾಯಚೂರು ಇರಬಹುದು, ನಿಮಗೂ ಕೂಡ ತೊಂದರೆಯಾಯಿತಾ ಸ್ವಾಮಿ? ಹುಬ್ಬಳ್ಳಿ–ಧಾರವಾಡದವರು ನೀವುಗಳು ಪಟ್ಟಣ ಪ್ರದೇಶದಿಂದ ಗೆದ್ದುಬಂದವರಾಗಿದ್ದೀರಿ, ದಯಮಾಡಿ ಅಧಿಕಾರಿಗಳು ಕೊಟ್ಟಿರುವಂತಹ ವರದಿ ಏನಿದೆ, ತಾವು ಇನ್ನೊಂದು ಸಾರಿ ಪರಾಮರ್ಶೆ ಮಾಡಿ ಇಂತಹ ಕಾನೂನಡಿಯಲ್ಲಿ ಅದನ್ನು ತಂದು ಎಲ್ಲಾ ಸಾಮಾನ್ಯರನ್ನು ಒಕ್ಕಲೆಬ್ಬಿಸುವಂತಹದ್ದು, ಸಾಮಾನ್ಯ ಬಡವರಿಗೆ ತೊಂದರೆಯನ್ನು ಕೊಡುವಂತಹದ್ದು, ಈ ಕಾನೂನನ್ನು ರಾಮಬಾಣವಾಗಿ ಇಟ್ಟುಕೊಂಡು ಅಧಿಕಾರಿಗಳು ಎಲ್ಲೋ ಒಂದು ಕಡೆಯಲ್ಲಿ ಸಾಮಾನ್ಯ ಜನರ ಮನೆಗಳನ್ನು ಜೆಸಿಬಿ ಯಂತ್ರವನ್ನು ತೆಗೆದುಕೊಂಡು ಹೋಗಿ ಅವರ ಮನೆಗಳನ್ನು ಒಡೆದುಹಾಕುವಂತಹದ್ದು, ತಪ್ಪಾಗುತ್ತದೆ, ಆದಕಾರಣ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನಾವು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿ ಎನ್ನುವುದರ ಬಗ್ಗೆ ಸಣ್ಣಪುಟ್ಟ ಮನೆಯನ್ನು ಕಟ್ಟಿಕೊಂಡಿರುವವರಿಗೆ ಯಾವ ರೀತಿಯಾಗಿ ಅವರನ್ನು ಕಾನೂನಿನಲ್ಲಿ ಅಳವಡಿಸುತ್ತೀರಾ ಅದನ್ನು ಹೊರತುಪಡಿಸಿ, ಎಕರೆಗಟ್ಟಲೆ ಜಾಸ್ತಿಯಾಗಿ ಮಾಡಿಕೊಂಡಿದ್ದರೆ, ನೀವು ಏನು ಬೇಕಾದರೂ ಕೂಡ ಕ್ರಮವನ್ನು ತೆಗೆದುಕೊಳ್ಳಿ. ಆದರೆ ಕೃಷಿ ಭೂಮಿಯನ್ನು ಕೃಷಿಯೇತರವಾಗಿ ಉಪಯೋಗಿಸಿಕೊಳ್ಳುತ್ತಿರುವವರಿಗೆ ಇದನ್ನು ತಾವು ದಯಮಾಡಿ ತೆಗದುಹಾಕಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಾ, ಇದೊಂದು ಸೂಕ್ಷ್ಮವಾದ ವಿಚಾರವಾಗಿರುವುದರಿಂದ ಈ ಸೂಕ್ಷ್ಮತೆಯನ್ನು ತಾವು ಅರಿತುಕೊಳ್ಳದೇ ಹೋದರೆ ಎಲ್ಲೋ ಒಂದು ಕಡೆ ಜನರು ಬೀದಿಗೆ ಇಳಿಯಬೇಕಾಗುತ್ತದೆ. ಅದಕ್ಕೆ ತಾವು ಅವಕಾಶವನ್ನು ಕೊಡಬಾರದು ಎಂದು ನಾನು ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ರಾಮಲಿಂಗಾರೆಡ್ಡಿ (ಜಯನಗರ) :– ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಸುಮಾರು 700 ಕೊಳಚೆ ಪ್ರದೇಶಗಳು ಇವೆ. ಅದರಲ್ಲಿ

ಬಹುತೇಕ ಸರ್ಕಾರಿ ಜಾಗಗಳಲ್ಲಿಯೇ ಸುಮಾರು 20-40-50 ವರ್ಷಗಳಿಗಿಂತಲೂ ಹೆಚ್ಚು ಬಹಳ ಹಿಂದಿನಿಂದಲೂ ಕೂಡ ಮನೆಯನ್ನು ಕಟ್ಟಿಕೊಂಡಿದ್ದಾರೆ. ಬಿಡಿಎಗೆ ಸೇರಿರುವಂತಹ ಜಾಗಗಳಲ್ಲಿಯೂ ಕೂಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದೇ ರೀತಿಯಾಗಿ ಕೊಳಚೆ ನಿರ್ಮೂಲನಾ ಮಂಡಳಿ ಪ್ರದೇಶಗಳನ್ನು ಕೂಡ ಅವರು notify ಮಾಡಿರುತ್ತಾರೆ. ಖಾಸಗಿ ಜಾಗವಾಗಿದ್ದರೆ ಕೂಡ ಅವರು ನೋಟಿಫೈ ಮಾಡಿರುತ್ತಾರೆ. ಸರ್ಕಾರಿ ಜಾಗವಾಗಿದ್ದರೂ ಕೂಡ ಅದನ್ನು ನೋಟಿಫೈ ಮಾಡಿ slum board ನವರು ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟಿರುತ್ತಾರೆ. ಈಗ ಏನು ಸರ್ಕಾರಿ ಜಾಗ ಬೆಂಗಳೂರು ಸುತ್ತಮುತ್ತ ಇರುವಂತಹ ಕಡೆಗಳಲ್ಲಿ ಸರ್ಕಾರಿ ಜಾಗಗಳಲ್ಲಿ ಬಡವರು ಏನು ಮನೆಯನ್ನು ಕಟ್ಟಿಕೊಂಡಿದ್ದಾರೆ, ಇವರುಗಳನ್ನು ತಾವು ಏನು ಮಾಡುತ್ತೀರಿ? ಇವರುಗಳ ಮನೆಯನ್ನು ತಾವು ಒಡೆಯುತ್ತೀರಾ? ಈಗ ತಾವು ಅವರನ್ನು ಜೈಲಿಗೆ ಹಾಕುತ್ತೀರಾ? ಬೆಂಗಳೂರು ನಗರದ ಸರ್ಕಾರಿ ಜಾಗಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವವರು 1-2 ಲಕ್ಷ ಜನರು ಅಲ್ಲ. ಸುಮಾರು 20 ಲಕ್ಷ ಜನರು ಇದ್ದಾರೆ. ತಾವು ಈ ವಿಧೇಯಕವನ್ನು ತರುವುದಕ್ಕಿಂತ ಮುಂಚೆ ಯೋಚನೆಯನ್ನು ಮಾಡುವುದು ಬೇಡವೇ? ನಗರ ಶಾಸಕರು ಅಲ್ಲ, ಎಲ್ಲಾ ಶಾಸಕರುಗಳನ್ನು ಕರೆದು ಒಂದು ಮೀಟಿಂಗ್‌ನ್ನು ಮಾಡುವುದು ಬೇಡವೇ? ನೀವು ಯಾರನ್ನು ಕರೆದು consult ಮಾಡಿದ್ದೀರಿ? ನೀವು ಅಧಿಕಾರಿಗಳ ಮಾತನ್ನು ಕೇಳಿಕೊಂಡು ಈ ಕಾನೂನನ್ನು ತಂದಿದ್ದೀರಿ. ಇಲ್ಲಿ ಪಾರ್ಲಿಮೆಂಟರಿ ಮೆಂಬರ್ಸ್ ಇದ್ದಾರೆ, ಶಾಸಕರುಗಳು ಇದ್ದಾರೆ, ವಿಧಾನಪರಿಷತ್ತಿನ ಸದಸ್ಯರುಗಳು ಇದ್ದಾರೆ, ನೀವು ಇವರುಗಳ ಅಭಿಪ್ರಾಯಗಳನ್ನು ತೆಗದುಕೊಂಡಿದ್ದೀರಾ? ಬಡವರುಗಳು ಎಲ್ಲಿಗೆ ಹೋಗಬೇಕು? ಹಳೆ ಬೆಂಗಳೂರು ಏನಿದೆ. ಹಳೆ ಬೆಂಗಳೂರು ಬಿಟ್ಟು ಉಳಿದಿರುವಂತಹ ಏನು ಕಾರ್ಪೋರೇಷನ್ ಲಿಮಿಟ್‌ನಲ್ಲಿ ಅರ್ಧ ಪ್ರದೇಶ ರೆವಿನ್ಯೂ ಪಾಕೆಟ್ ಆಗಿದೆ. ಇವೆಲ್ಲವೂ ಕೂಡ regularize ಆಗಿದೆ. ನಮ್ಮ ಕ್ಷೇತ್ರದಲ್ಲಿ 100 ವಾರ್ಡುಗಳಲ್ಲಿ ಬರುವಂತಹ ಪ್ರದೇಶಗಳಲ್ಲಿ ಇನ್ನು ವಾಸ ಮಾಡುತ್ತಿಲ್ಲ. ನಿಮ್ಮನ್ನು ಕೇಳಿದರೆ ನೀವು ಅವರಿಗೆ ಪ್ಲ್ಯಾನ್ ಕೊಡುತ್ತಿಲ್ಲ. ಕೇಳುವುದಕ್ಕೆ ಹೋದರೆ Conversion certificate ಗಳನ್ನು ಕೇಳುತ್ತಾರೆ. ಅದು ಕಾರ್ಪೋರೇಷನ್‌ಗೆ ಸೇರಿ 3 ವರ್ಷಗಳು ಆಗಿದೆ. ಬೆಂಗಳೂರು ಸುತ್ತ ಬೃಹತ್ ಬೆಂಗಳೂರು ಎಂದು ಏನು ಮಾಡಿದ್ದೀರಿ? ಅಲ್ಲೆಲಲಾ ರೆವಿನ್ಯೂ ಪಾಕೆಟ್ ಇವೆ. ಅಲ್ಲಿ ಅವರುಗಳು ಮನೆಯನ್ನು ಕಟ್ಟಿಕೊಂಡಿದ್ದಾರೆ. ಬಿಡಿಎ ಸೈಟುಗಳನ್ನು ನೀವು ಕೊಟ್ಟಿದ್ದರೆ, ರೆವಿನ್ಯೂ

ಪಾಕೆಟ್‌ಗಳಲ್ಲಿ ಅವರುಗಳು ಮನೆಯನ್ನು ಕಟ್ಟಿಕೊಳ್ಳುತ್ತಿದ್ದರೆ. ನೀವು ಎಷ್ಟು ವರ್ಷಗಳಿಂದ ಬಿಡಿಎ ಸೈಟುಗಳನ್ನು ಕೊಟ್ಟಿದ್ದೀರಿ? ಮಾನ್ಯ ಜೈಕರ್ ಜೆರೋಮ್‌ರವರು ಬಿಡಿಎ ಕಮೀಷನರ್ ಆಗಿದ್ದಾಗ ಸುಮಾರು 50 ಸಾವಿರ ಸೈಟುಗಳನ್ನು ಹಂಚಿದ್ದರು. ಅದಕ್ಕಿಂತ ಮುಂಚೆ ಸುಮಾರು 15 ವರ್ಷಗಳಿಂದ ಬೆಂಗಳೂರಿನಲ್ಲಿ ಸೈಟುಗಳನ್ನು ಕೊಟ್ಟಿರಲಿಲ್ಲ. ಬೆಂಗಳೂರಿಗೆ ಜನರು ವಲಸೆ ಬಂದು ರೆವಿನ್ಯೂ ಸೈಟು ಸಿಕ್ಕಿದೆ ಎಂದು ಹೇಳಿ ಮನೆಯನ್ನು ಕಟ್ಟಿಕೊಂಡರು. ಈಗ ನೀವು ಅವರಿಗೆ ಮೂರು ವರ್ಷ ಜೈಲಿಗೆ ಕಳುಹಿಸುತ್ತೇವೆಂದು ಹೇಳುತ್ತೀರಾ? ಬೆಂಗಳೂರು ಸುತ್ತಮುತ್ತಲು ನೀವು ಹೊಸದಾಗಿ ಜೈಲನ್ನು ಕಟ್ಟಬೇಕಾಗುತ್ತದೆ. ಏನು ವಿಧೇಯಕವನ್ನು ನೀವು ತಂದಿದ್ದೀರಿ? ಏನು ಇದು ವಿಧೇಯಕವೇ? ಇದು ಬಡವರ ಹಾಗೂ ಜನರ ವಿರೋಧಿ ವಿಧೇಯಕವಾಗಿದೆ. ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಹೇಳುತ್ತೇನೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ಈ ವಿಧೇಯಕವನ್ನು ಒಳ್ಳೆಯ ಉದ್ದೇಶದಿಂದ ತಂದಿರುವ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಆದರೆ, ಇದರ ಹಿಂದೆ ಏನು ಉದ್ದೇಶಗಳು ಇವೆ, ಆ ಬಗ್ಗೆ ನನಗೆ ಗೊತ್ತಿಲ್ಲ. ಏಕೆಂದರೆ ಇದರಲ್ಲಿ hidden agenda ಏನು ಇದೆ ಎಂದು ನನಗೆ ಗೊತ್ತಿಲ್ಲ. ಯಾರ ಒತ್ತಾಯದ ಮೇರೆಗೆ ಈ ಬಿಲ್ಲನ್ನು ಮಾನ್ಯ ಸಚಿವರು ಪ್ರೆಸ್ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಅದರ ವಿಮರ್ಶೆಯ ಬಗ್ಗೆಯೂ ಕೂಡ ನಾನು ಹೋಗುವುದಿಲ್ಲ. ಈಗಾಗಲೇ ಮಾನ್ಯ ಹಿರಿಯ ಸದಸ್ಯರುಗಳು ಕೆಲವೊಂದು ಡೌಟ್ಸ್‌ನ್ನು ಕೇಳಿದ್ದಾರೆ. ಅದನ್ನು ರಿಪೀಟ್ ಮಾಡುವುದಿಲ್ಲ. ನನಗೆ 2-3 ಡೌಟ್ಸ್‌ಗಳು ಇವೆ, ಅದನ್ನು ನಾನು ಕ್ಲ್ಯಾರಿಫೈ ಮಾಡುವ ಬಗ್ಗೆ ನಾನು ಸಚಿವರನ್ನು ತಮ್ಮ ಮುಖಾಂತರ ಕೇಳುತ್ತೇನೆ. 92 (ಎ) ನಲ್ಲಿ ಟೇಬಲ್‌ನಲ್ಲಿ 5 ನೇ ಕಲಂನಲ್ಲಿ ಇರುವಂತಹದ್ದು ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗಾಗಿ ನೀವು ಇದನ್ನು ಮಾಡಬಾರದು. ಇದಕ್ಕೆ ಮೂರು ವರ್ಷಗಳ ಕಾರಾಗೃಹವಾಸ ಎಂದು ಹೇಳಿದ್ದೀರಿ. ಇದರಲ್ಲಿ ಒಂದು clarificatio ನ್ನು ನೀವು ಕೊಡಬೇಕು. ಮೊನ್ನೆ ತಾನೇ ಕೇಂದ್ರ ಸರಕಾರ ಈ ಎಸ್.ಇ.ಜೆಡ್‌ನಲ್ಲಿ ಇವತ್ತು ರಾಜ್ಯಸರ್ಕಾರಗಳು, ಭೂಮಿಯನ್ನು ವಶಪಡಿಸಿಕೊಳ್ಳಬಾರದು ಅಂದರೆ "ನೀವು ಅಕ್ವೈರ್ ಮಾಡಬಾರದು, ನೇರವಾಗಿ ರೈತರಿಂದ ಖರೀದಿ ಮಾಡಬೇಕು" ಎಂದು ಸೂಚನೆ ಕೊಟ್ಟಿದೆ, ಇದು ತಮಗೆ ಗೊತ್ತಿದೆ, ಇದರ ಬಗ್ಗೆ ತಾವು ಪತ್ರಿಕೆಗಳಲ್ಲಿ ಓದಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಹಾಗಾದರೆ ಈಗ ರೈತರು

ಯಾರಾದರೂ industrialist ಬಂದು ಭೂಮಿ ಬೇಕು ಎಂದು ಅವರಗೆ ಮಾರಬೇಕಾದರೆ ಅದು ಇಂಡಸ್ಟ್ರಿಯಲ್ ಲೈನ್‌ಗೆ ಹೋಗಬೇಕೆ? ಅಂದರೆ ಅವರು ಎಷ್ಟು ಅದರ ಮೇಲೆ ಭಾರವನ್ನು ಬೀಳುತ್ತದೆ ಎನ್ನುವುದ್ನು ಕ್ಲ್ಯಾರಿಫೈ ಮಾಡಬೇಕು. ಒಂದು ವೇಳೆ centre ನಾಳೆ ನೀವು ಇಂಡಸ್ಟ್ರಿಯಲಿಸ್ಟ್ ನೇರವಾಗಿ ಭೂಮಿ ರೈತರಿಂದ ಖರೀದಿ ಮಾಡಬೇಕೆಂಬ ಬಗ್ಗೆ ಏನಾದರೂ ಕಾನೂನು ಪಾಸ್ ಮಾಡಿ ನೀವು ಇಂಡಸ್ಟ್ರಿಯಲ್ ಪರ್ಪಸ್‌ಗೆ ಅಕ್ವೈರ್ ಮಾಡಬಾರದು ಎಂದು ಏನಾದರೂ ಒಂದು ಕಾಯ್ದೆ ತಂದರೆ ಅದಕ್ಕೆ ನೀವು ಯಾವ ರೀತಿಯಾಗಿ react ಮಾಡುತ್ತೀರಿ. ಏಕೆಂದರೆ ಇದು ಅಗ್ರಿಕಲ್ಚರಲ್ ಲ್ಯಾಂಡ್. ರೈತ ನೇರವಾಗಿ industrialists ಗೆ ಅಕ್ವೈರ್ ಮಾಡದೇನೆ ಒಳ್ಳೆಯ ಧಾರಣೆಯನ್ನು ಕೊಟ್ಟು ಅವನಿಗೆ ಮಾರಲಿಕ್ಕೆ ಹೋದರೆ ಅವನು ಮೂರು ವರ್ಷ ಕಾರಾಗೃಹಕ್ಕೆ ಹೋಗಬೇಕಾಗುತ್ತದೆ. ಮಾನ್ಯ ಸಚಿವರೇ, ಇದು ಬಹಳ ಗಂಭೀರವಾದಂಥ ವಿಷಯವಿದು. ಇದಕ್ಕೆ ನೀವು ಕ್ಲ್ಯಾರಿಫಿಕೇಶನ್ ಕೊಡಬೇಕು. ಏಕೆಂದರೆ ಇಂಡಸ್ಟ್ರಿಯಲ್ ಪರ್ಪಸ್ ಮಾಡಬೇಕಾದರೆ ಅವರು ಇಂಡಸ್ಟ್ರಿಯಲ್ ಲೈನ್‌ನಲ್ಲೇ ಮಾಡಬೇಕೇ? ನೀವು ಹೇಳಿ, ಎಷ್ಟು ಖರ್ಚು ಬರುತ್ತದೆ, ಇಂಡಸ್ಟ್ರಿಯಲ್ ಲೈನ್‌ನಲ್ಲಿ ಮಾಡಬೇಕಾದರೆ, ಇವತ್ತು ಲಕ್ಷಾಂತರ ಎಕರೆ ಭೂಮಿ ಬೇಕಾಗುತ್ತದೆ. ಏಕೆಂದರೆ ಇವತ್ತು ಸುಮಾರು ಒಂದು ಎಸ್.ಇ.ಜೆಡ್. ಮಾಡಬೇಕಾದರೆ, 1000 ಹೆಕ್ಟೇರ್ ಅಂದರೆ ಸುಮಾರು 2,500 ಎಕರೆ ಭೂಮಿ ಪ್ರಶ್ನೆಯಿದು. For other industrial purpose, ಇದರ ಬಗ್ಗೆ ಖಂಡಿತವಾಗಿ ನೀವು ಈ ಸೆಕ್ಷನ್ ಅನ್ನು ಕೈಬಿಡಬೇಕು. ಇಲ್ಲವಾದರೆ ನೀವು ಕ್ಲ್ಯಾರಿಫೈ ಮಾಡಬೇಕು, ನಿಮ್ಮ ಉದ್ದೇಶವೇನಿರಬಹುದು, ನೀವು ಲೇಔಟ್ ಅಪ್ರೂವಲ್ ಮಾಡದೇನೆ ನೀವು concernned authority ಯಿಂದ ಸೈಟ್ ಅನ್ನು ಹೌಸಿಂಗ್ ಪರ್ಪಸ್‌ಗೆ ಮಾಡರಬಹುದೆಂದು ನೀವು ಈ ಬಿಲ್ ತಂದಿರಬಹುದು. ಈ ಸೆಕ್ಷನ್, ಆದರೆ ಇದು ರೈತರಿಗೆ ಬೇರೆ ಪರ್ಪಸ್‌ಗೆ ಏನಾದರೂ ಮಾಡಬೇಕಾಗುತ್ತದೆ. ಅದಕ್ಕೆ ಇದರ ಬಗ್ಗೆ ನೀವು ಕ್ಲ್ಯಾರಿಫಿಕೇಷನ್ ಕೊಡಬೇಕು. ಇನ್ನೊಂದು 192 ಬಿ, ಮಾನ್ಯ ಉಪಾಧ್ಯಕ್ಷರೆ, ಇದನ್ನು ತಾವು ಗಮನಿಸಬೇಕು. 192 ಬಿ ಯಲ್ಲಿ "whosoever abets any offence punishable by or under this Act of attempts to commit any such offence shall be punished with the penalty provided by or under this Act for committing such offences" ಇದನ್ನು ಮಾನ್ಯ ಸಚಿವರು ಸ್ವಲ್ಪ explain ಮಾಡಬೇಕು. What is the meaning of an

abetment? ನೀವು ಯಾವುದನ್ನು abetment ಎಂದು ಮಾಡುತ್ತೀರಿ? ಇದರಲ್ಲಿ ಯಾರ್ಯಾರು ಅಧಿಕಾರಿಗಳನ್ನು ನೀವು abet ಮಾಡಲಿಕ್ಕೆ ಇಚ್ಛಿಸುತ್ತಿದ್ದೀರೋ, ಅಥವಾ ಮುಂದೆ ಸರ್ಕಾರಗಳು ಇದನ್ನು ಒಂದು political instrument against political suppression. use ಮಾಡಬಹುದು, to settle political scores. ಯಾರ್ನಾದರೂ ಸುಮ್ಮನೆ ನೀವು 192 (ಬಿ) ಯಲ್ಲಿ abet ಮಾಡಿದ್ದೀಯ ಎಂದು ಹೇಳದೇ ನಿರ್ದಿಷ್ಟವಾಗಿರತಕ್ಕಂಥ ಕಾರಣ ಇಲ್ಲಿ ಹೇಳಬೇಕು. Abetment ಎಂದರೆ, What do you call an abetment? ಅಂದರೆ ಇನ್ನೊಂದು ಇದೆ, " ...or attempts to commit any such offence,...." Attempt ಮಾಡಿದೆಯೆಂದು ನೀವು ಇದನ್ನು ಹೇಗೆ ಸಾಬೀತು ಪಡಿಸುತ್ತೀರಿ? ಇದನ್ನು clear ಆಗಿ ಹೇಳಬೇಕು, ಅಂದರೆ ಒಂದು ವೇಳೆ 192 ಬಿ ಏನಿದೆ, ಮುಂದೆ ಸರ್ಕಾರದ ಕೈಯಲ್ಲಿ ಇವತ್ತು ತಮ್ಮ political opponents ಅನ್ನು ಸದೆಬಡಿಯುತಕ್ಕಂಥ ಒಂದು instrument ಕೊಟ್ಟ ಹಾಗೆ ಆಗುತ್ತದೆ. ಇದನ್ನು ನೀವು ಕ್ಲ್ಯಾರಿಫೈ ಮಾಡಬೇಕು. ಮಾನ್ಯ ಸಚಿವರು ಗಮನಿಸಬೇಕು. 192 (ಬಿ) ಯನ್ನು ಇಲ್ಲಿ ಕೈಬಿಡಬೇಕಾಗುತ್ತದೆ. ಇಲ್ಲವಾದರೆ ನಿರ್ದಿಷ್ಟವಾಗಿ ನೀವು ಯಾವುದ್ನು abet ಎಂದು ಹೇಳುತ್ತೀರಿ ಎಂದು ಹೇಳಬೇಕು. ಆಮೇಲೆ 'attempts to' ಅಂತ ಏನಿದೆ, ಇದು ಬಹಳತಪ್ಪಾಗಿರುವುದು, ಇದನ್ನು ತಕ್ಷಣ ನೀವು ಕೈಬಿಡಬೇಕು. ಇನ್ನೊಂದು ಮಾನ್ಯ ಅಧ್ಯಕ್ಷರೇ, ಕೊನೆಯಲ್ಲಿ ಉದ್ದೇಶಗಳಲ್ಲಿ ಇವರು ಹೇಳುತ್ತಾರೆ, ನಿಮ್ಮ ಮಾಧುಸ್ವಾಮಿಯವರು ಹೇಳಿದ ಹಾಗೆ ಯಾವುದು ರಿಜೆಕ್ಟ್ ಆಗಿವೆ, ರಿಜೆಕ್ಟ್ ಆಗಿರತಕ್ಕಂಥ ಅರ್ಜಿಗಳು, ಅವರು ಏನು ಹೇಳುತ್ತಾರೆಂದರೆ, 'Rejection of applications does not mean eviction. ಮಾನ್ಯ ಸಚಿವರು ಗಮನವಿಟ್ಟು ಇದಕ್ಕೆ ಕ್ಲ್ಯಾರಿಫಿಕೇಷನ್ ಕೊಡಬೇಕು. " Rejection of applications does not mean eviction. Their continued accupancy would entitle them sometimes, adverse possession. Therefore, it is necessary for the Government to take action to evict such people forthwith." ಅಂದರೆ, here ou are contradicting yourself. ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕ್ಲ್ಯಾರಿಫಿಕೇಷನ್ ಹೇಳಬೇಕು. ಈ ಬಿಲ್ ಬಗ್ಗೆ ನಾನು ಕ್ಲ್ಯಾರಿಫಿಕೇಷನ್ ಕೇಳುತ್ತಿದ್ದೇನೆ, ಬೇರೇನೂ ನಾನು ಕೇಳುತ್ತಿಲ್ಲ. ಬಿಲ್‌ನ ಮೇಲೆ ಕ್ಲ್ಯಾರಿಫಿಕೇಷನ್ ಕೇಳದೇ ಹೋದರೆ ಈ ಸದನ ಏಕೆ ಇದೆ?

ಶ್ರೀ ಎನ್. ಧರ್ಮಸಿಂಗ್ :- ಇದು ಬಹಳ Important Bill, ಇದರ ಮೇಲೆ ಎಲ್ಲರೂ ಬೆಳಕು ಚೆಲ್ಲುತ್ತಿದ್ದಾರೆ, ಎಲ್ಲರೂ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಬಿಲ್ ಮೇಲೆ ಮಾತನಾಡಲಿಕ್ಕೆ ಇಷ್ಟು ಸಮಯ ತೆಗೆದುಕೊಳ್ಳಬೇಡಿ ಎಂದರೆ ನಾವು ಶಾಸನ ಸಭೆಗೆ ಬಂದಿದ್ದೇಕೆ ನೀವು ಹೇಳಿ? ದಯಮಾಡಿ ಸಹಕರಿಸಬೇಕು ಮಾನ್ಯ ಉಪಾಧ್ಯಕ್ಷರೇ, ಬಿಲ್ ವಿಷಯದ ಮೇಲೆ ಮಾತನಾಡಲಿಕ್ಕೆ ಯಾವುದೇ ಕಾಲಮಿತಿ ಹಾಕಕೂಡದು, ಏಕೆಂದರೆ ನಾವು ಇಲ್ಲಿ ಸದನಕ್ಕೆ ಬಂದಿರುವುದು ಕಾನೂನು ಮಾಡಲಿಕ್ಕೆ. ಮಸೂದೆ ಬಗ್ಗೆ ವಿಮರ್ಶೆ ಮಾಡಲಿಕ್ಕೆ. ಇಲ್ಲವಾದರೆ ನಮ್ಮ ಕ್ಷೇತ್ರದ ಸಮಸ್ಯೆ ಬಗ್ಗೆ ಮಾತನಾಡಲಿಕ್ಕೆ ಸದನಕ್ಕೆ ಬರುತ್ತೇವೆಯೇ? ಉಪಾಧ್ಯಕ್ಷರು ಈ ರೀತಿ ತಾವು ಖಂಡಿತವಾಗಿ ಮಾಡಬಾರದು. ಇವರು they are contradicting themeselves. ನೀವು ಕರೆಕ್ಟ್ ಆಗಿ ಹೇಳಬೇಕು ಏಕೆಂದರೆ, "Rejection of application does not mean eviction" ಎಂದು ಇದೆ. What does that mean? Eviction ಮಾಡಲಿಕ್ಕಿಲ್ಲ ಎನ್ನುತ್ತೀರಿ. ಆಮೇಲೆ ಕ್ರಮೇಣವಾಗಿ They will enjoy this possession for same more time and eventually the Government will evict them. ಇದರ ಅರ್ಥ ಏನು? ನನಗೆ ಅರ್ಥವಾಗುತ್ತಿಲ್ಲ, ತಮಗೆ ಅರ್ಥವಾಯಿತೋ ಏನೋ ಗೊತ್ತಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಕ್ಲ್ಯಾರಿಫೈ ಮಾಡಬೇಕು. ಹಾಗಾಗಿ ಮೂರು ಪ್ರಶ್ನೆಗಳನ್ನು ಎತ್ತಿದ್ದೇನೆ,

1) Selling of the agricultural land for industrial purpose,

2) Deletion of Section 192-B. ಅದರಲ್ಲಿ abetment ಇರತಕ್ಕಂಥದ್ದನ್ನು ತೆಗೆದು ಹಾಕಬೇಕು.

3) They are contradicting themselves. ಇದರ ಬಗ್ಗೆ ಮಾನ್ಯ ಸಚಿವರು ಕ್ಲ್ಯಾರಿಫಿಕೇಷನ್ ಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :- ಪರಮೇಶ್ವರನಾಯಕ್ ಮಾತನಾಡಿ.

ಶ್ರೀ ಪಿ.ಟಿ. ಪರಮೇಶ್ವರನಾಯಕ್ (ಹರಪನಹಳ್ಳಿ) :- ಸನ್ಮಾನ್ಯ ಉಪಾಧ್ಯಕ್ಷರೇ, ಭೂ ಕಂದಾಯ ತಿದ್ದುಪಡಿ ವಿಧೇಯಕ 2007, ವಿಧೇಯಕ ಸಂಖ್ಯೆ 28 ಅನ್ನು

ಮಾನ್ಯ ಕಂದಾಯ ಸಚಿವರು ಮಂಡನೆ ಮಾಡಿದ್ದಾರೆ. ಅದರ ಬಗ್ಗೆ ಬಹಳಷ್ಟು ಜನ ಮುಖಂಡರುಗಳು floor leaders ಬೆಳಕನ್ನು ಚೆಲ್ಲಿದ್ದಾರೆ. ಇದರಲ್ಲಿ ಎರಡನ್ನು ಮಾತ್ರ ತಮ್ಮ ಮುಖೇನ ಸನ್ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ. ಕ್ರಮ ಸಂಖ್ಯೆ 1 ಮತ್ತು 4 ಇದು ಬಹಳ ಮುಖ್ಯವಾಗಿರತಕ್ಕಂಥದ್ದು ಮತ್ತು ಬಡವರಿಗೆ ಇದು ಮಾರಕವಾಗುವಂತಹ ಮಸೂದೆಯೆಂಬ ವಿಚಾರವನ್ನು ನಾನು ಹೇಳಬಯಸುತ್ತೇನೆ. ನನಗೆ ಗೊತ್ತಿರುವ ಹಾಗೆ ಸುಮಾರು 25 ಕ್ಕೂ ಹೆಚ್ಚು 30–40 ವರ್ಷಗಳಿಂದ ಅನುಭವದಲ್ಲಿರತಕ್ಕಂಥ ಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಬೇರೆ ಬೇರೆ ಜಾತಿಯಲ್ಲಿರುವಂಥ ಬಡವರು ಅವರಿಗೆ Form-50, Form-53 ಅನ್ನು ಇಲ್ಲಿಯವರೆಗೂ ಅವರಿಗೆ ಸಲ್ಲಿಸಲಿಕ್ಕೆ ಗೊತ್ತಿಲ್ಲ. ಏಕೆಂದರೆ ದಿನನಿತ್ಯ ನಮ್ಮ ಹತ್ತಿರ ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡು ನಾವು ಇಷ್ಟು ವರ್ಷದಿಂದ ಈ ಭೂಮಿಯನ್ನು ಪಡೆದುಕೊಂಡಿದ್ದೇವೆ, ಇದನ್ನು ನಮಗೆ ಪಟ್ಟಾ ಮಾಡಿಸಿಕೊಡಿ, ಮಂಜೂರು ಮಾಡಿಸಿಕೊಡಿ ಎಂದು ಬರೆಯುತ್ತಾರೆ. ಇದು ಬಹಳ ಮುಖ್ಯವಾಗಿರತಕ್ಕಥಂದ್ದು, ಅನ್ನಕ್ಕೆ ಗತಿ ಇಲ್ಲದಂಥ ಬಡವರು, ಇವತ್ತು 30–40 ವರ್ಷಗಳಿಂದ ಸಾಗುವಳಿ ಯಾರು ಮಾಡಿಕೊಂಡು ಬಂದಿದ್ದಾರೆ, ಅವರು ಅನುಭವದಲ್ಲಿದ್ದಾರೆ. ಇನ್ನೂ Form-50, Form-53 ಹಾಕದೇ ಇರುವಂಥವರು ಇದ್ದಾರೆ. ಅವರಿಗೆ ಇದು ಬಹಳಷ್ಟು ಮಾರಕವಾಗುವಂಥದ್ದು. ಸನ್ಮಾನ್ಯ ಕಂದಾಯ ಸಚಿವರು ಬಹಳ ಗಂಭೀರವಾಗಿ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಅದರ ಜೊತೆಗೆ ನಮ್ಮ ಕ್ಷೇತ್ರದಲ್ಲಿ ತುಂಗಭದ್ರಾನದಿ ಹಾದು ಹೋಗುತ್ತಿದೆ. ಅಲ್ಲಿ ಸುಮಾರು ಸರ್ಕಾರಿ ಜಮೀನು ಮತ್ತು ಕಂದಾಯ ಜಮೀನು, ಈ ಎರಡೂ ಜಮೀನಿನಲ್ಲಿಯೂ ಸಹ ಸರ್ಕಾರದ ಜಮೀನು ಮತ್ತು ರಿಸರ್ವ್ ಫಾರೆಸ್ಟ್, ಹೊಟ್ಟಳ್ಳಿ ಎಂಬ ಗ್ರಾಮವನ್ನು ಸಂಪೂರ್ಣವಾಗಿ ಸ್ಥಳಾಂತರ ಮಾಡಿ ಸುಮಾರು 25 ವರ್ಷದ ಕೆಳಗೆ ಅದನ್ನು ರಿಸರ್ವ್ ಫಾರೆಸ್ಟ್ ಲ್ಯಾಂಡ್‌ನಲ್ಲಿ ಕಟ್ಟಿದ್ದಾರೆ. ಕಟ್ಟಿಸಿದ್ದೇವೆ, ಆದರೆ ಇಲ್ಲಿಯವರೆಗೆ ಅವರಿಗೆ ಯಾವುದೇ ದಾಖಲಾತಿ ಇಲ್ಲ, ಪಟ್ಟಾ ಇಲ್ಲ. ಕಂದಾಯ ರಸೀತಿ ಇಲ್ಲ ಅಥವಾ ಗ್ರಾಮ ಪಂಚಾಯ್ತಿ ರೆಕಾರ್ಡ್ ಇಲ್ಲ, ಏಕೆಂದರೆ ಅದು ರಿಸರ್ವ್ ಫಾರೆಸ್ಟ್ ಇದೆಯೆಂದು. ಅದರೊಟ್ಟಿಗೆ ನಂದಿಹಾಳ ಎನ್ನತಕ್ಕಂಥ ಗ್ರಾಮ ಇದೆ ಅದನ್ನು ಕೂಡ ರೆವಿನ್ಯೂ ಲ್ಯಾಂಡ್‌ನಲ್ಲಿ ಒಂದಿಷ್ಟು ಫಾರೆಸ್ಟ್ ಲ್ಯಾಂಡ್‌ಗೆ ಸ್ವಲ್ಪ ಶಿಫ್ಟ್ ಮಾಡಿದ್ದೇವೆ. ಅಲ್ಲಿಯೂ ಕೂಡ ಅವರಿಗೆ ಯಾವುದೇ ದಾಖಲಾತಿಯಿಲ್ಲ, ಅಧಿಕಾರಿಗಳು ಹೋಗಿ ಅವರಿಗೆ ಪದೇ ಪದೇ ಕಿರಿ ಕಿರಿ ಮಾಡತಕ್ಕಂಥದ್ದು ಮತ್ತೆ

ಭಾಗಶಃ ಕಡತಿ, ಅದನ್ನೂ ಕೂಡ ನದಿ ಮುಳುಗಡೆಯಿಂದ ಶಿಫ್ಟ್ ಮಾಡಿದ್ದಾರೆ ಭಾಗಶಃ ಹಲವಾಗಿಲು ಇವೆಲ್ಲಾ ಗ್ರಾಮಗಳನ್ನೂ ಕೂಡ ಆ ನದಿ ಪ್ರವಾಹದಿಂದ ಆ ಫಾರೆಸ್ಟ್ ಲ್ಯಾಂಡ್ ಮತ್ತು ಕಂದಾಯ ಸರ್ಕಾರೀ ಜಮೀನಿನಲ್ಲಿ ಸ್ಥಳಾಂತರ ಮಾಡಿದ್ದೇವೆ. ಅವರಿಗೆ ಈ ಕಾನೂನಿನಿಂದ ಅವರು ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಅವರ ಜೀವನ ಮಾಡುವುದು ಹೇಗೆ, ಈ ಮಸೂದೆಯಿಂದ ಅವರು ಬಹಳ ಸಮಸ್ಯೆಗೆ ಮತ್ತು ಕಷ್ಟಕ್ಕೆ ಒಳಗಾಗತಕ್ಕಂಥ ಸಮಸ್ಯೆಯಿದೆ, ಹಾಗಾಗಿ ದಯಮಾಡಿ ಕಂದಾಯ ಮಂತ್ರಿಗಳು ಈ ಬಿಲ್ಲನ್ನು ಬಹಳಷ್ಟು ಆಳವಾಗಿ ಅಧ್ಯಯನ ಮಾಡಿ ಜೊತೆಗೆ ಹಲವಾರು ಮುಖಂಡರ ಅಭಿಪ್ರಾಯವನ್ನು ಪಡೆದು ಏನು ಬಡವರು ಅದರಲ್ಲೂ ಕೂಡ ಲಂಬಾಣಿ ಜನಾಂಗದವರು ಆ ಗುಡ್ಡಗಾಡಿಗೆ ಹೆಚ್ಚು ಹಂದಿಕೊಂಡಿರುವಂಥ ಜನ ನಾವು, ಅಲ್ಲಿ ಸರ್ಕಾರಿ ಕಮೀನು ಇದೆ, ಫಾರೆಸ್ಟ್ ಲ್ಯಾಂಡ್ ಇದೆ, ಇವೆಲ್ಲವನ್ನು ಕೂಡ ಅವರು ಅವರ ಅಜ್ಜ, ಮುತ್ತಜ್ಜರ ಕಾಲದಿಂದಲೂ ಕೂಡ ಸಾಗುವಳಿ ಮಾಡಿಕೊಂಡು ಬಂದಿರತಕ್ಕಂಥ ಜನ, ಅವರಿಗೆ ಅರ್ಜಿ ಹಾಕುವುದೇ ಗೊತ್ತಿಲ್ಲ. ಬಹಳಷ್ಟು ಜನ ಕೂಡ ಅರ್ಜಿಯನ್ನು ಹಾಕಿಯೂ ಇಲ್ಲ. ಇದನ್ನು ಗಂಭೀರವಾಗಿ ಪರಿಶೀಲನೆ ಮಾಡಿ. ಏಕೆಮದರೆ ತಾವು ಈ ಬಿಲ್ಲನ್ನು ಜಾರಿಗೆ ತರುವುದರಿಂದ ಅದರಲ್ಲಿಯೂ ಕೂಡ ವಿಶೇಷವಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮತ್ತು ಬಡವರಿಗೆ ಇದರಿಂದ ತುಂಬಾ ಅನ್ಯಾಯವಾಗಿದೆ. ಇದರ ಬಗ್ಗೆ ತಾವು ಮರುಚಿಂತನೆಯನ್ನು ಮಾಡಿದರೆ ಬಹಳ ಸೂಕ್ತವೆಂಬ ಮಾತನ್ನು ಸನ್ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀಮತಿ ಟಿ. ಭಾಗೀರಥಿ (ಕೊಟ್ಟೂರು) :- ಮಾನ್ಯ ಸಭಾಧ್ಯಕ್ಷರೇ, ನಾವು ಜಾಸ್ತಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಹಲವಾರು ವಿಚಾರಗಳನ್ನು ನಮ್ಮ ಸೀನಿಯರ್ಸ್ ಹೇಳಿರುವುದರಿಂದ Form-50, 53 ಬಗ್ಗೆ ಒಂದು ವಿಷಯವನ್ನು ಸನ್ಮಾನ್ಯ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಏನೆಂದೆ ಈ ಫಾರಂ 53 ಹಾಕಿರತಕ್ಕಂಥ ಅರ್ಜಿಗಳ ಬಗ್ಗೆ ಇವತ್ತಿನವೆರೆಗೆ ತಹಶೀಲ್ದಾರರ ಕಛೇರಿಯಲ್ಲಿ ಸರಿಯಾದ ರೆಕಾರ್ಡ್ಸ್ ಇಲ್ಲ. ರೆಕಾರ್ಡ್ಸ್‌ಗಳನ್ನು ಸರಿಯಾದ ರೀತಿಯಲ್ಲಿ ಅವರು maintain ಮಾಡಿಯೇ ಇಲ್ಲ. ನಾವು ಕೊಟ್ಟಿದ್ದಾರೆ, ಎಷ್ಟು ಪಟ್ಟಾ ಆಗಿಲ್ಲ, ಎನ್ನತಕ್ಕಂಥ ಮಾಹಿತಿಯನ್ನು ನಾವು ತೆಗೆದುಕೊಂಡಿರುವುದರಿಂದ ಆ ಮಾಹಿತಿ ನಮ್ಮ ಕಡೆ ಇದೆ. ಇವತ್ತು ಆ ಅರ್ಜಿ ಹಾಕಿರುವ ಜನ ಅಲ್ಲಿಗೇನಾದರೂ ಹೋದರೆ ಅಲ್ಲಿ ಯಾವುದೇ ರೀತಿಯ ಕಡತಗಳಿಲ್ಲ. ಅಲ್ಲಿರುವವರು ಟ್ರಾನ್ಸ್‌ಫರ್ ಆಗಿ ಹೋಗುವಾಗ ಅವರ ಸ್ಥಳಕ್ಕೆ ಬಂದವರಿಗೆ

ರೆಕಾರ್ಡ್ಸ್‌ಗಳನ್ನೆಲ್ಲಾ ಕೊಟ್ಟು ಹೋಗುವಂಥ ಸಂದರ್ಭದಲ್ಲಿ ಯಾವುದೇ ರೀತಿಯ ರೆಕಾರ್ಡ್ಸ್‌ಗಳನ್ನು ಸರಿಯಾಗಿ ಮೆಂಟೇನ್ ಮಾಡಿಲ್ಲ. ಸರಿಯಾದ ರೀತಿಯಲ್ಲಿ ಸರ್ವೇಯರ್ಸ್ ಮೊದಲೇ ಇಲ್ಲ. ಇವತ್ತು ಸರ್ವೆ ಮಾಡಿ ತಮ್ಮ ಚಕ್ಕುಬಂದಿ ಏನು ಹೇಗೆ ಎಂದು ತಿಳಿದುಕೊಳ್ಳಬೇಕಾದರೆ ಯಾರು ಅರ್ಜಿಯನ್ನು ಹಾಕಿರುತ್ತಾರೆ ಅವರೇ ಸರ್ವೆಯರ್ ಅನ್ನು ಕರೆದುಕೊಂಡು ಹೋಗಿ, ಅವರೇ ರೆಕಾರ್ಡ್ಸ್ ಎಲ್ಲಾ ಮಾಡಿಸಿ ಸಾಕಷ್ಟು ಬಾರಿ ತಹಶೀಲ್ದಾರ್‌ರವರ ಕಛೇರಿಗೆ ಬಂದರೂ ಕೂಡ ಏನೂ ಪ್ರಯೋಜನವಾಗುತ್ತಿಲ್ಲ. ಇವತ್ತು ನಾವು ಎಲ್ಲಿಗೆ ಬಂದಿದ್ದೇವೆಂದರೆ, ಅರ್ಜಿಯನ್ನು ಸಲ್ಲಿಸುವವರು ದ್ವಿಪತ್ರಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು, ಒಂದು ಡಿ.ಸಿ. ಆಫೀಸ್‌ನಲ್ಲಿ ಮತ್ತೊಂದು ತಹಶೀಲ್ದಾರ್ ಕಛೇರಿಯಲ್ಲಿರಲಿ ಎನ್ನುವಂಥ ಮಟ್ಟಿಗೆ ನಾನು ನಿರ್ದೇಶನವನ್ನು ಕೊಡತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ಆದ್ದರಿಂದ ಕಛೇರಿಗಳಲ್ಲಿ ದಾಖಲೆಗಳನ್ನು ಬಹಳ ವ್ಯವಸ್ಥಿತವಾಗಿಡಲಿಕ್ಕೆ ತಾವು ಒಂದು ನಿರ್ದೇಶನವನ್ನು ನೀಡಬೇಕೆಂದು ಸನ್ಮಾನ್ಯ ಸಭಾಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(6 : 30 pm)

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮುಕ್ಕಾಲು ಭಾಗದ ಬಿಲ್ಲನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೆಂಗಳೂರು ಸುತ್ತಮುತ್ತ ಮನೆಗಳನ್ನು ಇವತ್ತು ಕಟ್ಟಿದ್ದು ಅಲ್ಲ. ಸುಮಾರು 20-30 ವರ್ಷಗಳ ಹಿಂದೆ ಕಟ್ಟಿದ ಮನೆಗಳು. ಆ ಅಕ್ರಮ ಮನೆಗಳನ್ನು ಸಕ್ರಮ ಮಾಡಬೇಕಾಗುತ್ತದೆ. ಇನ್ನು ಕೆಲವರು ಸುತ್ತ ಕಂಪೌಂಡ್ ಹಾಕಿಕೊಂಡು ಜಿಂಕ್ ಶೀಟ್‌ಗಳನ್ನು ಹಾಕಿ ಮನೆಗಳನ್ನು ಕಟ್ಟಿದ್ದಾರೆ. ಅದನ್ನು ತಾವು ಪತ್ತೆ ಮಾಡಬೇಕಾಗುತ್ತದೆ. ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಜನ, ಅದನ್ನು ಈಗ ಈ ಅಕ್ರಮ ಸಕ್ರಮದ ಜೊತೆಗೆ ಒಂದು ವರ್ಗ ಜಿಂಕ್ ಶೀಟ್ ಹಾಕಿ ಮನೆಗಳನ್ನು ಕಟ್ಟಿದ್ದಾರೆ. ಅವುಗಳನ್ನು ಪತ್ತೆ ಮಾಡಿ ತೆರವುಗೊಳಿಸಬೇಕಾಗುತ್ತದೆ. ಅದನ್ನು ನೀವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ನಿಮ್ಮ ಸರ್ವೆ ಸೆಟಲ್‌ಮೆಂಟ್‌ನಲ್ಲಿ ಆಕಾರ್ ಬಂದ್ ದುರಸ್ತಿಯಾಗಿದ್ದು 1963-64-65 ರಲ್ಲಿ, ಇದುವರೆಗೂ ನೀವು ಆಕಾರ್ ಬಂದ್ ದುರಸ್ತಿ ಮಾಡಿಲ್ಲ. ಅದಕ್ಕೆ ನಾವು ಕೇಳಿದರೆ staff ಇಲ್ಲ. Surveyors ಇಲ್ಲ. ಅದನ್ನು ಇಡೀ ರಾಜ್ಯದ ಎಲಾ ಜಿಲ್ಲೆಯಲ್ಲಿ ಕನಿಷ್ಟ 15-20 ವರ್ಷಗಳಿಗೊಮ್ಮೆ ಸರ್ವೆ ಮಾಡಬೇಕು. ಇತ್ತೀಚಿಗೆ ಅವರು ಯಾವಾಗಲೂ, ನಮ್ಮದೇ ಆದ ರೈತರ ಜಮೀನನ್ನು ಸರ್ವೆ ಮಾಡಬೇಕಾದರೆ Surveyors ಇಲ್ಲ ಅಂತ ಹೇಳುವಂತಹ

ಪರಿಸ್ಥಿತಿಗೆ ತಲುಪಿದ್ದೀರಿ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರಿ ಜಮೀನು ಯಾವುದು, ಅಥವಾ ಸ್ವಂತ ಜಮೀನು ಯಾವುದು ಎನ್ನುವುದನ್ನು ನೀವು ಹೇಳಬೇಕಾಗುತ್ತದೆ. ಇದರ ಜೊತೆಗೆ ನಮ್ಮ ಹಳ್ಳಿಗಾಡಿನಲ್ಲಿ ಏನು ಬಯಲು ಸೀಮೆ ಇದೆ, ನಾನು ಇವತ್ತು ನನ್ನ ಹಳ್ಳಿ ಬಗ್ಗೆ ನಾನು ಹೇಳುತ್ತೇನೆ. ಹಳ್ಳಿಯಲ್ಲಿ ನಾವು ತಿಪ್ಪೆ ಹಾಕಿರುತ್ತೇವೆ. ವಾಮೆ ಹಾಕಿರುತ್ತೇವೆ. ಅಂದರೆ ಹುಲ್ಲು ವಾಮೆ. ಮತ್ತು ಕಣ ಮಾಡಿರುತ್ತೇವೆ. ಇದೆಲ್ಲಾ ಸರ್ಕಾರಿ ಜಮೀನು. ಇದನ್ನು ಹಾಕಿಕೊಂಡಿರುವವರು ಒಬ್ಬರಲ್ಲ. ಊರೆಲ್ಲಾ ಬಡವರು, ಸ್ಥಿತಿವಂತರು ಎಲ್ಲರೂ ಹಾಕಿಕೊಂಡಿರುತ್ತಾರೆ. ಇಂಥಾದ್ದನ್ನು ತಾವು ತಂದಾಗ ಅವರು ಜೈಲಿಗೆ ಹೋಗಬೇಕೆ? ಹಳ್ಳಿಗಳಲ್ಲಿ ಇಂಥಾದ್ದು ಬಹಳ ವಿಚಿತ್ರವಾದುದು. ಇದನ್ನು ತಾವು ಯಾವ ತರಹ ಮಾಡುತ್ತೀರಿ. ತಿಪ್ಪೆ, ವಾಮೆ, ಕಣ ಇದನ್ನು ಮಾಡಿಕೊಂಡಿರುವ ಬಗ್ಗೆ ಯೋಚನೆ ಮಾಡಬೇಕು ರೆಕಾರ್ಡ್ಸ್ ಇಡುವುದು ಬಹಳ ದೊಡ್ಡ ಕೆಲಸವಾಗಿದೆ ತಾಲ್ಲೂಕು ಕಛೇರಿಯಲ್ಲಿ. ತಾಲ್ಲೂಕು ಮಟ್ಟದಲ್ಲಿ ಈ ಬಗ್ಗೆ ಒಂದು ದೊಡ್ಡ ದಂಧೆಯಾಗಿದೆ. ಕೋಲಾರದಲ್ಲಿ ಒಬ್ಬ ಮನುಷ್ಯ ಇದ್ದ. ಆತ ಮೊನ್ನೆ ಸತ್ತು ಹೋದ. 1939 ನೇ ಇಸವಿಯಲ್ಲಿ ಆಗಿದ್ದಂತಹ ಜಿಲ್ಲಾ ಕಲೆಕ್ಟರ್ ಸಹಿ ಹಾಕಿ ಒಂದು ಪತ್ರವನ್ನು ನನಗೆ ತಂದು ಕೊಟ್ಟರು. ನೋಡಿ ಇದನ್ನು ಮಾಡಿದ್ದೇನೆಂದು. ಏನು ಮಾಡಿದ್ದಾನೆಂದರೆ ಆತ ಹೋಗಿ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ರೆಕಾರ್ಡ್ಸ್ ರೂಮ್‌ಗೆ ಹೋಗಿ ಆ ಸಹಿ ಹೇಗಿತ್ತೋ ಹಾಗೆ ಮಾಡಿ ತಂದುಕೊಟ್ಟಿದ್ದಾನೆ. ಇತ್ತೀಚೆಗೆ ತಾಲ್ಲೂಕು ಮಟ್ಟದಲ್ಲಿ ಬಹಳ ಜಾಸ್ತಿಯಾಗಿದೆ. ಇದನ್ನು ನೀವು ಕಂಟ್ರೋಲ್ ಮಾಡದೇ ಜೈಲಿಗೆ ಹಾಕುತ್ತೇವೆಂದರೆ ಇದೆಲ್ಲಾ ಬಂಕಂ ಅಂತ ನಾನಂತೂ ಹೇಳುತ್ತೇನೆ. ಇವರು ಯಾರನ್ನೂ ಜೈಲಿಗೆ ಹಾಕುವುದಕ್ಕೆ ಆಗುವುದಿಲ್ಲ. ಈ ತರಹ ದೊಡ್ಡ ಧಣಿಗಳನ್ನು ಯಾರನ್ನೂ ಜೈಲಿಗೆ ಹಾಕುವುದಕ್ಕೆ ಆಗುವುದಿಲ್ಲ. ಇದರ ಜೊತೆಗೆ ಏನು ಸೈಟುಗಳನ್ನು ಮಾಡಿ ಕೆಲವು ಸಹಕಾರ ಸಂಘಗಳ ಹೆಸರಿನಲ್ಲಿ CA site ಗಳಲ್ಲಿ ಕೂಡ ಮತ್ತೆ ಮಾರಿದ್ದಾರೆ. ಇದನ್ನು ಸರ್ಕಾರಿ ಜಮೀನು ಆದರೂ ಕೂಡ ಒತ್ತುವರಿ ಮಾಡಿಕೊಂಡು ಮತ್ತೆ ಅದನ್ನು ಮಾರುವಂತಹ ಕೆಲಸ ಮಾಡಿ ಅಲ್ಲಿ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಇದನ್ನು ತಾವು ಯಾವ ತರಹ ನಿಯಂತ್ರಣ ಮಾಡಬೇಕು ಎನ್ನುವಂಥದ್ದನ್ನು ನೋಡಬೇಕಾಗುತ್ತದೆ. ಇವತ್ತು ಉಳಿದ ಜಾಗದಲ್ಲಿ ಯಾರ್‍ಯಾರು ಸರ್ಕಾರಿ ಜಮೀನನ್ನು ಬೆಂಗಳೂರು ಸುತ್ತಮುತ್ತಲು ಸರ್ಕಾರಿ ಜಮೀನನ್ನು ಒತ್ತುವರಿ ಮಾಡುವುದನ್ನು ನಿಲ್ಲಿಸಲೇಬೇಕಾಗುತ್ತದೆ. ಇದರ ಜೊತೆಗೆ ಕೂರ್ಗ್‌ನಲ್ಲಿದ್ದಂತೆ ಜಮ್ಮಾ, ಬಾಣೆ ತರಹ ನಮ್ಮಲ್ಲಿ ಗುಂಡು ತೋಪುಗಳಿವೆ. ಸುಮಾರು 200–300

ವರ್ಷಗಳಿಂದ ತೋಪುಗಳನ್ನು ಹೊಡೆದು ಹಾಕಿ ವ್ಯವಸಾಯ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಆ ಜಮೀನನ್ನು grant ಮಾಡುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಹೋದ ಸಲ ನೀವು ಗುಂಡು ತೋಪುಗಳನ್ನು ಇಟ್ಟಿದ್ದೀರಿ, ಈ ಸಲ ಗುಂಡು ತೋಪು ತೆಗೆದಿದ್ದೀರಿ. ನಾನು ಈಗ ಏನು ಹೇಳುತ್ತಿದ್ದೇನೆಂದರೆ ಈ ಗುಂಡು ತೋಪುಗಳು ಇವತ್ತು 90% ಇಲ್ಲ. ಇನ್ನುಳಿದ 10% ಇದ್ದರೆ ಅವುಗಳನ್ನು ಹಾಗೆಯೇ ಬಿಟ್ಟುಬಿಡಿ. ಇಲ್ಲದಿದ್ದನ್ನು ಕನಿಷ್ಟಪಕ್ಷ ಆ ರೈತನಿಗೆ ಅವನು ಯಾವ ರೈತನೇ ಆಗಿರಲಿ ಗುಂಡು ತೋಪನ್ನು ಅವನು ಇಷ್ಟು ದಿವಸ ವ್ಯವಸಾಯಕ್ಕಾಗಿ ಪರಿವರ್ತನೆ ಮಾಡಿಕೊಂಡಿದ್ದಾನೆ. ಅದನ್ನು ಅವರಿಗೆ grant ಮಾಡುವಂತಹ ಕೆಲಸ ಮಾಡಬೇಕಾಗುತ್ತದೆ. ಈ ಬಿಲ್ಲಿನ ಬಗ್ಗೆ ಚಿಂತನೆ ನಡೆಸಬೇಕು. ಕೆಲವು ಪ್ರಮುಖವಾದ ವಿಷಯಗಳನ್ನು mention ಈ ಬಜೆಟ್‌ನಲ್ಲಿ ಮಾಡಿದ್ದೀರಿ. ಇವೆಲ್ಲಾ ಆಗಬೇಕು ಇವೆಲ್ಲಾ ಆಗದೇ ಇದ್ದರೆ ಯಾರೂ ಕೂಡ ಭಯ ಪಡುವುದಿಲ್ಲ. ಬೆಂಗಳೂರಿನಂತಹ ನಗರಗಳಲ್ಲಿ ಯಾರೂ ಕೂಡ ಭಯ ಪಡುವುದೇ ಇಲ್ಲ. ಮನೆಗಳನ್ನು ಮಾತ್ರ ಸಕ್ರಮ ಮಾಡುವಂಥದ್ದನ್ನು ಮಾಡಿದರೆ, ಇದನ್ನು ಮಾಡುವುದು ತಪ್ಪಿಲ್ಲವೆನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟು ಮಾತನಾಡವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೃಷ್ಣ ಭೈರೇಗೌಡ (ವೇಮಗಲ್) :– ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಏನು ತಂದಿದ್ದಾರೆ, ಈ ವಿಧೇಯಕದ ಉದ್ದೇಶವೇನಿದೆ, ಆ ಉದ್ದೇಶಕ್ಕೆ ನಾನಂತೂ ವೈಯಕ್ತಿಕವಾಗಿ ಧ್ವನಿ ಗೂಡಿಸುತ್ತೇನೆ. ನಿಮ್ಮ ಉದ್ದೇಶವನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಸಹ ನಿಮ್ಮ ಉದ್ದೇಶ ಈಡೇರಬೇಕೆಂದು ಬಯಸತಕ್ಕಂತಹವನು, ಆದರೆ ನಿಮ್ಮ ಉದ್ದೇಶ ಈಡೇರಬೇಕಾದರೆ ಈಗ ಏನೆಲ್ಲಾ ಮಾತನಾಡಿದರು ಇದರಲ್ಲಿ ಗೊಂದಲಗಳಿವೆ. ಈ ಕಾನೂನಿನಲ್ಲಿ ಮೊದಲು ಆ ಗೊಂದಲಗಳನ್ನು ನಿವಾರಣೆ ಮಾಡಬೇಕಾಗುತ್ತದೆ. ನಿವಾರಣೆ ಮಾಡದೇ ಹೋದರೆ ನಿಮ್ಮ ಉದ್ದೇಶ ಈಡೇರುವುದಿಲ್ಲ. ಇವತ್ತು ನೀವು ಸಂಖ್ಯೆ ಬಲ ಇದೆ ಎಂದು ಹೇಳಿ ಈ ವಿಧೇಯಕವನ್ನು ಇಲ್ಲಿಂದ ಪಾಸ್ ಮಾಡಿಕೊಂಡು ತೆಗೆದುಕೊಂಡು ಹೋದರೂ ಸಹ ಈ ಗೊಂದಲಗಳಿಂದ ನೀವು ಯಾವುದನ್ನು ಸಹ ಸಾಕಾರ ಮಾಡುವುದಕ್ಕಾಗುವುದಿಲ್ಲ. ಮುಖ್ಯವಾಗಿ ಏನು ನಾವು ಗ್ರಾಮಾಂತರ ಪ್ರದೇಶದಿಂದ ಬಂದಂತಹ ಶಾಸಕರು ಏನು ಹೇಳುತ್ತಿದ್ದೇವೆ, ಸಾಕಷ್ಟು ಜನ ಇವತ್ತು ಅರ್ಜಿಗಳನ್ನು ಹಾಕದೇ ಇರತಕ್ಕಂತಹವರು ಇದ್ದಾರೆ. ಅರ್ಜಿಗಳನ್ನು ಹಾಕಿರುವವರಿಗೆ ತಾವು

Exemption ಕೊಟ್ಟಿದ್ದೀರಿ. ಅರ್ಜಿಗಳನ್ನು ಹಾಕದೇ ಇದ್ದು 15–20 ವರ್ಷಗಳಿಂದ ಅಥವಾ ಇನ್ನೂ ಹೆಚ್ಚಿನ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅದು ತಮಗೆ ಗೊತ್ತಿರತಕ್ಕಂಥದ್ದು. ಮಾನ್ಯ ಮಂತ್ರಿಗಳು ಸಹ ಲಾಯರ್ ಆಗಿ ಕೆಲಸ ಮಾಡಿರುವುದರಿಂದ ಎಲ್ಲಾ ವಿಷಯಗಳು ಗೊತ್ತಿದೆ. ಅವರು ಏನು 30–40 ವರ್ಷಗಳಿಂದ ಏನು ಸಾಗುವಳಿ ಮಾಡಿರುವವರ ಪರಿಸ್ಥಿತಿ ಏನು ಎನ್ನತಕ್ಕಂಥದ್ದನ್ನು ನಾನು ತಮಗೆ ಮುಖ್ಯವಾಗಿ ಕೇಳತಕ್ಕಂತಹ ಪ್ರಶ್ನೆ. ಅವರು ನಗರ ಮತ್ತು ಗ್ರಾಮಾಂತರ ಪ್ರದೇಶದಿಂದ ಬಂದಿರುವುದರ ಜೊತೆಗೆ ಲಾಯರ್ ಆಗಿ ಕೆಲಸ ಮಾಡಿರುವುದರಿಂದ ರೈತರ ಸಮಸ್ಯೆ ಸಹ ಗೊತ್ತಿದೆ. ಇಲ್ಲಿ ಮಾನ್ಯ ಸದಸ್ಯರೊಬ್ಬರು ತಿಳಿಸಿದರು, ಉದ್ದೇಶವನ್ನು ಮೂಲವಾಗಿ ಅಂದರೆ Intention, what is the interntion of encroaching of an Government land ಅದನ್ನು ಮೂಲವಾಗಿ ನಾವು ಇಟ್ಟುಕೊಳ್ಳುತ್ತೇವೆ ಎನ್ನುವಂತಹ ಅಂಶವನ್ನು ಇಲ್ಲಿ ಕ್ರಮ ಸಂಖ್ಯೆ 2 ರಲ್ಲಿ ಹೇಳಿದ್ದಾರೆ. ಆದರೆ ಆ ಉದ್ದೇಶವನ್ನು ಯಾವ ರೀತಿ ಸಾಬೀತುಪಡಿಸುತ್ತೀರಿ? ಅದಕ್ಕೆ ಏನಾದರೂ ಒಂದು ಮಾನದಂಡ ಬೇಕಲ್ಲ. ಮಾನದಂಡ ಇಲ್ಲದೇ ಹೋದಾಗ ನೀವು ಯಾವುದನ್ನು ಸಹ ಸಾಬೀತುಪಡಿಸುವುದಕ್ಕೆ ಆಗುವುದಿಲ್ಲ. ಸಾಕಾರವಾಗಿ ಯಾರು ಬೇಕಂತಲೇ ಒತ್ತುವರಿ ಮಾಡಿದ್ದಾರೆ, ಅದನ್ನು ಸಾಬೀತು ಮಾಡುವುದಕ್ಕೆ ಆಗುವುದಿಲ್ಲ. ನಾನು ನಿಜವಾದ ಒಬ್ಬ ರೈತ ಅಂತ ಹೇಳಿ, ರೈತನ ಹೆಸರು ಹೇಳಿಕೊಂಡು ಎಲ್ಲರೂ ಅನುಕೂಲ ಪಡೆದುಕೊಳ್ಳುತ್ತಾರೆ. ರೈತ ಬಡವನಾಗಿ ಬಡವನಿಗೆ ಈ ಉದ್ದೇಶವನ್ನು establish ಮಾಡುವುದಕ್ಕೆ ಆಗದೇ ಅವನಿಗೆ ತೊಂದರೆಯಾಗುತ್ತದೆ. ಹಾಗಾಗಿ, ಈಗ ಅವರು ಹೇಳಿದ ಹಾಗೆ 1967 ಕ್ಕೆ ಮೊದಲು ಏನು ಇನಾಂ ನಂಬರ್‌ಗಳು ಅಂತ ಕೊಟ್ಟಿದ್ದರು. ತದನಂತರ Revenue Survey No. ಬಂದಿದೆ. ಎಷ್ಟೋ ಕಡೆ ಅದಕ್ಕೂ ಇದಕ್ಕೂ ತಾಳೆಯೇ ಇಲ್ಲ. ಅವರೇನು ಆಕಾರ್ ಬಂದ್ ದುರಸ್ತಿ ಅಂತ ಹೇಳಿದರು, ಅದಕ್ಕೆ ಮತ್ತೆ ನಾನು ಮುಂದುವರೆಸಿ ಹೇಳುತ್ತೇನೆ, ಸಾಕಷ್ಟು ತಾಳೆಯಾಗಿಲ್ಲ, ಸರ್ವೆಯಾಗಿಲ್ಲ, ಇವುಗಳ ಗೊಂದಲದಲ್ಲಿ ಎಷ್ಟೋ ಜನಕ್ಕೆ ಅನ್ಯಾಯವಾಗುತ್ತದೆ. ಯಾವಾಗ ನಿಜವಾದಂತಹ ರೈತನಿಗೆ ಅನ್ಯಾಯವಾಗುತ್ತದೆ, ಆಗ ನಾವ್ಯಾರು ಸುಮ್ಮನೆ ಕೂರುವುದಿಲ್ಲ. ನಾವು ಗಲಾಟೆ ಮಾಡಿದಾಗ ಏನಾಗುತ್ತದೆ, ಈ ಕಾನೂನು ಈ ವಿಧೇಯಕ ಯಾವುದೂ ಸಾಕಾರವಾಗುವುದಿಲ್ಲ. ಹಾಗಾಗಿ ನಿಜವಾಗಿ ಯಾರು ಒತ್ತುವರಿ ಮಾಡಿದ್ದಾರೆ, ಅವರನ್ನು ನೀವು ನಿಜವಾಗಿಯೂ ತೆರವುಗೊಳಿಸಿ ಅವರಿಂದ ಜಮೀನು ತೆಗೆದುಕೊಳ್ಳಬೇಕು, ಅವರಿಗೆ ಶಿಕ್ಷೆ ವಿಧಿಸಬೇಕೆನ್ನುವ

ಉದ್ದೇಶ ನಿಮಗಿದ್ದರೆ ಕಾನೂನನ್ನು ಸ್ವಲ್ಪ ಸುಧಾರಣೆ ಮಾಡಿ ತನ್ನಿ. ಇದರ ಬಗ್ಗೆ ಆಳವಾಗಿ ಯೋಚನೆ ಮಾಡಬೇಕಾಗಿದೆ. ತಾವೇನು ಕ್ರಮ ಸಂಖ್ಯೆಗಳಲ್ಲಿ provisions ಮಾಡಿದ್ದೀರಾ ಅವುಗಳನ್ನು ಇನ್ನೂ ಸ್ವಲ್ಪ ನಿರ್ದಿಷ್ಟವಾಗಿ define ಮಾಡಬೇಕಾಗುತ್ತದೆ. Definitions ಅನ್ನು ಸ್ವಲ್ಪ improve ಮಾಡಬೇಕಾಗುತ್ತದೆ. ನಾನು ತಮಗೆ ಸಾಕಾರವಾಗಿ ಈ ಸಲಹೆಗಳನ್ನು ಕೊಡುತ್ತಿದ್ದೇನೆ. ಇನ್ನು ಸ್ವಲ್ಪ fine tune ಮಾಡಿ define ಮಾಡಿ ತಮ್ಮ provisions ಹಾಗೂ intention ಅನ್ನು ಹೇಗೆ establish ಮಾಡುವುದು ಎನ್ನುವುದನ್ನು ಸಹ ತಾವು define ಮಾಡಬೇಕಾಗುತ್ತದೆ. ಮತ್ತೇಕೆ ನಾನು ಸಾಮಾನ್ಯವಾಗಿ ಒಂದು ಸಲಹೆ ಕೊಡತಕ್ಕಂತದ್ದು ಈ ಕಾನೂನುಗಳನ್ನು ತರುವಾಗ ನಾವು ತುಂಬಾ ಒಂದು ಅವಸರದಲ್ಲಿ ತಂದು ಆ ಉದ್ದೇಶಗಳನ್ನು ಸಾಕಾರ ಮಾಡುವುದಕ್ಕೆ ಆಗದೇ ಇರತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕಾನೂನುಗಳನ್ನು ಸ್ವಲ್ಪ ಯೋಚನೆ ಮಾಡಿ ತಂದರೆ ಒಳ್ಳೆಯದು. ಈಗ ಇದನ್ನು ಹಿಂದೆ ಒಂದು ಸಲ ತಂದು ಮತ್ತೆ ತಂದಿದ್ದೀರಿ. ಆದರೆ ಇವತ್ತಿಗೂ ಸಹ ಸಾಕಷ್ಟು ನ್ಯೂನತೆಗಳಿವೆ. ನಿಮ್ಮ ಉದ್ದೇಶ ಸರಿಯಾಗಿದೆ. ಆದರೆ ಆ ಕಾನೂನನ್ನು ಸಾಕಾರ ಮಾಡಬೇಕಾದರೆ ಅದಕ್ಕೆ ತಕ್ಕ ಹಾಗೆ ನಾವು ಯೋಚನೆ ಮಾಡಿ ಕಾನೂನು ತರಬೇಕಾಗುತ್ತದೆ. ಆದ್ದರಿಂದ ನಾನು ತಮಗೆ request ಮಾಡತಕ್ಕಂತದ್ದು ಸ್ವಲ್ಪ better define ಮಾಡಬೇಕಾಗುತ್ತದೆ. ಮತ್ತೆ ಕಾನೂನನ್ನು water tight ಆಗಿ ತರಬೇಕಾಗುತ್ತದೆ. So water tight ಆಗಿ ನೀವು ಮಾಡಬೇಕಾದರೆ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಅವಸರಕ್ಕೆ ತಂದು ಯಾವುದನ್ನು ಸಾಕಾರ ಮಾಡುವುದಕ್ಕೆ ಆಗುವುದಿಲ್ಲವೆಂದು ಸಾರ್ವಜನಿಕವಾದಂತಹ ಒಮದು ಸಲಹೆ ನೀಡುತ್ತಾ ಆದರೂ ಸಹ ತಾವು ದಯವಿಟ್ಟು Re-define ಮಾಡಿ ಮತ್ತೆ ತೆಗೆದುಕೊಂಡು ಬನ್ನಿ. ಟೈಟಾಗಿ ಒಂದು ಕಾನೂನನ್ನು ತನ್ನಿ. ನಿಮಗೆ ಇನ್ನೊಂದು ಸಲಹೆ ಕೊಡುತ್ತೇನೆ. ಸಾಧ್ಯವಾಗುವ ಹಾಗಿದ್ದರೆ ಇದಕ್ಕೇ ಅಂತ ಒಂದು Appellate Tribunal ಅಂತ ಮಾಡುವುದು ಬೇಡ. ಈಗಾಗಲೇ ಬೇಕಾದಷ್ಟು Special Courts ಅವೂ ಇವೂ ಆಗಿ ಒಂದಕ್ಕೊಂದು conflict ಆಗಿ ಎಲ್ಲ ಫಜೀತಿಯಾಗಿ ಕೂತಿದೆ. ಆದರೆ ಒಬ್ಬ Special Prosecutor ನ್ನು ನೇಮಕ ಮಾಡಲು ಆಗುತ್ತದೆಯೋ? ವಿಶೇಷವಾಗಿ 5 ಅಥವಾ 2 ವರ್ಷದ ಅವಧಿಗೆ ಈ ಕೇಸ್‌ಗಳನ್ನು ಪ್ರಾಸಿಕ್ಯೂಟ್ ಮಾಡಲಿಕ್ಕೆ ತಮ್ಮ ಕೆಳಗೆ ಕಂದಾಯ ಇಲಾಖೆ ಅಥವಾ ಯಾವುದೇ ಇಲಾಖೆಯುಲ್ಲಾಗಬಹುದು can you appoint Special

Prosecutor? ಇದರ ಬಗ್ಗೆ ತಾವು ಯೋಚನೆ ಮಾಡಬೇಕು ಅಂತ ಹೇಳುತ್ತ, ದಯವಿಟ್ಟು ನಗರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರು ಆಗಬಹುದು ಗ್ರಾಮಾಂತರ ಪ್ರದೇಶದ ಕೃಷಿಕರದಾಗಬಹುದು ಸಮಸ್ಯೆಗಳಿಗೆ ಪರಿಹಾರ ಕೊಡುವ ರೀತಿಯಲ್ಲಿ ಈ ಕಾನೂನನ್ನು ಮರುಪರಿಶೀಲನೆ ಮಾಡಿ ಮತ್ತೆ ತಾವು ತರಬೇಕು ಅಂತ ಒತ್ತಾಯ ಮಾಡಲಿಕ್ಕೆ ಬಯಸುತ್ತೇನೆ.

ಶ್ರೀ ಯೋಗೀಶ್ ಭಟ್ (ಮಂಗಳೂರು) :- ಅಧ್ಯಕ್ಷರೇ, ಕರ್ನಾಟಕ ಭೂ ಕಂದಾಯ ವಿಧೇಯಕ 2007 ವನ್ನು ಸ್ವಾಗತ ಮಾಡುತ್ತಿದ್ದೇನೆ. ಜೊತೆಯಲ್ಲಿ ಇದನ್ನು ಒಂದು comprehensive Bill ಆಗಿ ತಂದಿದ್ದರೆ ಸರಿಹೋಗುತ್ತಿತ್ತು. ಇದರಲ್ಲಿ ಕೇವಲ ಕಂದಾಯ ಇಲಾಖೆಗೆ ಸಂಬಂಧಪಟ್ಟ ಜಾಗ ಮಾತ್ರವಲ್ಲ ಧಾರ್ಮಿಕದತ್ತಿ ಇಲಾಖೆಯದು, ವಕ್ಫ್ ಬೋರ್ಡಿಗೆ ಸೇರಿದ್ದು, ಬಿಡಿಎ, ಕೊಳಚೆ ನಿರ್ಮೂಲನ ಮಂಡಳಿಗೆ ಸೇರಿದ್ದು ಹೀಗೆ ಹತ್ತು ಹಲವು ಇಲಾಖೆಗಳಿಗೆ ಸೇರಿದ್ದ ಜಾಗಗಳೂ ಒತ್ತುವರಿಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ರಾಮಸ್ವಾಮಿ ಸಮಿತಿಯ ಒಬ ಸಕ್ರಿಯ ಸದಸ್ಯನಾಗಿ ನಾನೂ ಅನೇಕ ಸಲ inspection ಮಾಡುವ ಸನ್ನಿವೇಶದಲ್ಲಿ ಅನೇಕ ಸಂಗತಿಗಳು ನಮ್ಮ ಗಮನಕ್ಕೆ ಬಂದಿವೆ. ಒಂದು, ಕೇವಲ ಸಣ್ಣ ಮನೆಗಳು ಮಾತ್ರ encroach ಆಗಿರುವುದಿಲ್ಲ, ಬಹಳ ದೊಡ್ಡ ಕಟ್ಟಡಗಳೂ ಬಂದಿವೆ. ಎರಡು, inspection ಗಳ ಮಧ್ಯದ 10 ದಿವಸದ ಮಧ್ಯೆ ನೋಡುತ್ತಿರುವಾಗಲೇ ಹೊಸ ಕಟ್ಟಡಗಳು ಬರುತ್ತವೆ, ಸಾರಾಸಗಟಾಗಿ ಇದೆಲ್ಲ ನಡೆಯುತ್ತಿದೆ, ಅಲ್ಲಿರುವ ಒಬ್ಬ ವ್ಯಕ್ತಿಯನ್ನು ತೋರಿಸಿದಾಗ ಸ್ಥಳೀಯರು ಹೇಳುತ್ತಿದ್ದರು, ಆ ವ್ಯಕ್ತಿಯ ಕಿಮ್ಮತ್ತು ಎಷ್ಟು ಅಂತ ಹೇಳಬಲ್ಲಿರ ಅಂತ. " ಲಕ್ಷಾಧೀಶ್ವರ ಅಂದರೆ ಇಲ್ಲ, ಇಲ್ಲ ಕೋಟ್ಯಾಧೀಶ." ಇಂಥ ಅನೇಕ ಸಂಗತಿಗಳನ್ನು ನೋಡಿದಾಗ ಇದನ್ನೆಲ್ಲ ಹೇಗೆ ಮಾಡುತ್ತಿದ್ದಾರೆ ಅಂತ ಕೇಳಿದಾಗ ಅವರ ಜೊತೆ ಇಂತಿಂಥ ಅಧಿಕಾರಿಗಳು ಶಾಮೀಲಾಗಿದ್ದಾರೆ, ಆದ್ದರಿಂದಲೇ ಇಂಥದೆಲ್ಲ ಆಗಲು ಸಾಧ್ಯವಾಯಿತು ಅಂತ ಹೇಳಿದ ಹಿನ್ನೆಲೆಯಲ್ಲಿ ಕೇವಲ ಕಂದಾಯ ಇಲಾಖೆಗೆ ಸೇರಿ ಮಾತ್ರವಲ್ಲ ಬೇರೆ ಇಲಾಖೆಗಳನ್ನೂ ಸೇರಿಸಿ ತಂದಿದ್ದರೆ ಬಹಳ ಉಪಯುಕ್ತವಾಗುತ್ತಿತ್ತು. ಅಲ್ಲದೆ ಇದರಲ್ಲಿ ಮೂರಕ್ಕೆ ಸಂಬಂಧಪಟ್ಟು ಇಂಥ ಉದ್ದೇಶಕ್ಕೇ ಅಂತ ಇದ್ದರೂ ಖೋಟ ದಾಖಲೆ ಸೃಷ್ಟಿಸಿರುವುದು, ಆಮೇಲೆ ಆ ಭೂಮಿ ಕಬಳಿಸುವುದು, ಬಹುಶಃ ಆ ದಾಖಲೆಗಳನ್ನು ತಯಾರು ಮಾಡಿರುವ ಬಗ್ಗೆ ಒಬ್ಬ ನಿವೃತ್ತ ಅಧಿಕಾರಿಯನ್ನು ಉಪಯೋಗ ಮಾಡಿಕೊಂಡು ಹೀಗೆಲ್ಲ ಆಗಿದೆ ಎಂಬ ಸಾಕಷ್ಟು ಮಾಹಿತಿ ವರದಿಯಲ್ಲಿದೆ. ಇನ್ನೊಂದು ಬಹಳ interesting

ವಿಷಯ ಅಂದರೆ, ತಾವೂ ಇದನ್ನು ಗಮನಿಸಬೇಕು : ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಜಾಗವಿದ್ದರೆ ಬಿಡಿಎ ಮೇಲೆ ಕೇಸ್ ಹಾಕುವುದು, ಬಿಡಿಎಯನ್ನು ಪಾರ್ಟಿ ಮಾಡಿಕೊಂಡು ಒಂದು ತರಹ ಗೊಂದಲ ಸೃಷ್ಟಿಸುವುದು, ಅದೇ ರೀತಿ ಬಿಡಿಎ ಪ್ರಾಪರ್ಟಿ ಆದರೆ ಬೆಂಗಳೂರು ಮಹಾನಗರಪಾಲಿಕೆ ಮೇಲೆ ಕೇಸನ್ನು ಹಾಕಿ ಅವರನ್ನು ಪಾರ್ಟಿ ಮಾಡುವುದು, ಹೀಗೆ ಗೊಂದಲ ಹುಟ್ಟುಹಾಕಿ ಮಧ್ಯ ಲೈಸನ್ಸ್ ಪಡೆದುಕೊಳ್ಳುವುದು, ಗೊಂದಲದ ಉದ್ದೇಶ ಈ ವಿಷಯ ಕೋರ್ಟಿಗೆ ಹೋಗಿದೆ ಎಂಬ ಚಿತ್ರ ಸೃಷ್ಟಿಸಿ ಯಾವ ರೀತಿ ಮುಂದೆ ಇದರಿಂದ advantage ತೆಗೆದುಕೊಳ್ಳುತ್ತಿದ್ದರು ಎಂಬ ಮಾಹಿತಿ ಆಧಾರದಲ್ಲಿ ಈ ಬಗ್ಗೆ ಕೂಡ ವಿಶೇಷವಾಗಿ ಒಂದು ಪರಿಶೀಲನೆ ನಡೆಸದೇ ಇದ್ದರೆ ಕೇವಲ ದಾಖಲಾತಿಗಳು ಮಾತ್ರವಲ್ಲ, ನ್ಯಾಯಾಲಯದ ಮುಂದೆ ಹೋಗಿರುವುದು ಇವನ್ನೆಲ್ಲಾ ಪರಿಶೀಲಿಸುವ ಅವಶ್ಯಕತೆ ಇದೆ. ನಂ. ರಲ್ಲಿ ಕೊಡಗು ಜಿಲ್ಲೆಯ ಜುಮ್ಮ ಪಾಣೆ ಭೂಮಿ ಪ್ರಸ್ತಾಪಿಸುವಾಗ ಕುಮ್ಕಿ ದಕ್ಷಿಣ ಕನ್ನಡಕ್ಕೆ ಸಂಬಂಧಿಸಿದ್ದು ಇದರ ಬಗ್ಗೆಯೂ ಪರಿಶೀಲಿಸಬೇಕು. ನಂತರ ಕ್ಲಾಸ್ 5 ಕ್ಕೆ ಸಂಬಂಧಿಸಿ ಕೃಷಿ ಭೂಮಿಯನ್ನು ಕೃಷಿಯೇತರವಾಗಿ ಪರಿವರ್ತಿಸದೇ ಪೂರ್ವಾನ್ವಯವಾಗುವಂತೆ ಮಾರಾಟ ಮಾಡುವುದು ಇದಕ್ಕೆ ಮೂರು ವರ್ಷ ಕಾರಾಗೃಹವಾಸ ಅಥವಾ 10 ಸಾವಿರ ಜುಲ್ಮಾನೆ ಅಂತ ಹಾಕಲಾಗಿದೆ. ಕನ್ವರ್ಷನ್‌ಗೆ ಸಂಬಂಧಿಸಿ ಇರುವುದರ ಬಗ್ಗೆ ತಮ್ಮ ಗಮನಕ್ಕೆ zonal conversion ಗೆ ಸಂಬಂಧಿಸಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯುಡಿಗೆ ಬಂದರೆ ಇಲ್ಲಿ ಎಷ್ಟು ಬೇಗ ಅದು ವಿಲೇ ಆಗುತ್ತದೆ? 5, 6, 10 ಸೆಂಟ್ಸ್‌ಗಳಿಗೆಲ್ಲಾ zone conversion ಅಂತ ಆದರೆ ಆ ಕಡತಗಳು ಮೂವೇ ಆಗುವುದಿಲ್ಲ. ಇದರ ಬಗ್ಗೆಯೂ ವಿಶೇಷವಾಗಿ ಪರಿಶೀಲಿಸಬೇಕಾಗಿದೆ. ಪಾಪದವರು ಏನೋ ಒಂದು ಮನೆ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಾಡಬೇಕು ಅಂದರೆ ಇಲ್ಲಿಂದ ಕ್ಲಿಯರೆನ್ಸ್ ಸಿಗುವುದಿಲ್ಲ. 6–8 ತಿಂಗಳು ಕಾಯುವಂಥ ಸ್ಥಿತಿಯಿದೆ. ಇದರ ಬಗ್ಗೇನೂ ತಾವು ಪರಿಶೀಲನೆ ಮಾಡಬೇಕು. ವಿಶೇಷವಾಗಿ ವಿವಿಧ ಇಲಾಖೆಗಳಲ್ಲಿ ಒಂದು ಪ್ರಶ್ನೆ ಕೇಳಿದ್ದೆವು; ನಿಮ್ಮ ಇಲಾಖೆಗಳಲ್ಲಿ ಆಸ್ತಿ ರಿಜಿಸ್ಟರ್ ಮೇಂಟೇನ್ ಮಾಡಿದ್ದೀರ ಅಂತ. ತಾರ ಹತ್ತಿರವೂ ಮಾಹಿತಿ ಇರಲಿಲ್ಲ. ಇಷ್ಟು ವರ್ಷಗಳಾದರೂ ಯಾವ ಆಸ್ತಿಯ ರಿಜಿಸ್ಟರೂ ಮೇಂಟೇನ್ ಆಗಿಲ್ಲ. ಇದು ದುರಂತ, ಇದರಿಂದ ನಾವು ಕಳೆದುಕೊಂಡಿದ್ದು, ಒತ್ತುವರಿಯಾಗಿದ್ದು ಯಾವುದೂ ಗೊತ್ತಾಗಿಲ್ಲ. ಈಗ ಜಂಟಿ ಸದನ ಸಮಿತಿ ಪತ್ತೆ ಹಚ್ಚಿದ ನಂತರ ಎಲ್ಲರ ಕಣ್ಣು ತೆರೆಯುವ ಸ್ಥಿತಿ ಬಂದಿದೆ. ಇದನ್ನೂ ಕಡ್ಡಾಯಗೊಳಿಸುವ

ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು, ಇದರ ಬಗ್ಗೆ comprehensive ಆಗಿ ತರಲು ಕ್ರಮ ಕೈಗೊಳ್ಳುವಿರ? ಈ ಹಿನ್ನೆಲೆಯಲ್ಲಿ ತಾವು ಯೋಚನೆ ಮಾಡಬೇಕು ಅಂತ ನಾನು ವಿನಂತಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ (ಚಿಂಚೋಳಿ) :- ಇದರಲ್ಲಿ ಅಬೆಟರ್ಸ್ ಅಂತ ಪ್ರಾವಿಜನ್‌ನಲ್ಲಿ ಏನು ಸೇರಿಸಿದೆ. ಅಬೆಟರ್ಸ್ ಯಾರು ಅಂದರೆ ಅಧಿಕಾರಿಗಳು. ಗ್ರಾಮಲೆಕ್ಕಿಗನಿಗೆ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ರೊಕ್ಕ ಕೊಟ್ಟರೆ ಅವನು ಪಹಣಿಯಲ್ಲಿ ಹೆಸರು ಹಚ್ಚುತ್ತಾನೆ. ಅರಣ್ಯ ಅಧಿಕಾರಿಗೆ ರೊಕ್ಕ ಕೊಟ್ಟರೆ ಹೊಡೆದುಕೋ ಅಂತ ಅರಣ್ಯ ಭೂಮಿ ಬಿಡುತ್ತಾನೆ. ಮತ್ತು ಪ್ರತಿ ವರ್ಷ ಇಲ್ಲಿ ಗಿಡ ನೆಟ್ಟಿದೆ ಅಂತ ತೋರಿಸಿ ರೊಕ್ಕ ತೆಗೆದುಕೊಳ್ಳುತ್ತಾರೆ. ಬಹಳ ರೊಕ್ಕ ಕೇಳುತ್ತಿದ್ದ ಅಂದರೆ ಶಾಸಕರ ಹತ್ತಿರ ಬರುತ್ತಾರೆ ನಾವು ಏನೋ ಮಾಡಿದರೆ ಮತ್ತೆ ಅವರು ಆ ವರ್ಷ ಉಳಿಸಿಕೊಳ್ಳುತ್ತಾರೆ. ಕಡಿಮೆ ರೊಕ್ಕ ಕೇಳಿದ ಅಂದರೆ ಅವರವರ ಮಧ್ಯೆ ಎಲ್ಲ ಸರಿಹೋಗುತ್ತದೆ. ಅಬೆಟರ್ಸ್ ಅಂದರೆ ರೆವಿನ್ಯೂ ಮತ್ತು ಅರಣ್ಯ ಅಧಿಕಾರಿಗಳು. ಬೇರೆ ಅಬೆಟರ್ಸ್ ಅಂದರೆ ರಾಜಕಾರಣೀಗಳು, ಡಿಸ್‌ಕ್ಲೋಸ್ ಮಾಡುತ್ತೇವೆ ಅಂದರೆ ಅದಕ್ಕೆ ನಾವು ಬಿಡುವುದಿಲ್ಲ. ಆದ್ದರಿಂದ ಮೊದಲು ಅಧಿಕಾರಿಗಳನ್ನು ರಾಜಕಾರಣಿಗಳನ್ನು ಅಬೆಟರ್ಸ್ ಸ್ಥಾನದಲ್ಲಿ ತರಬೇಕಾಗಿದೆ. ಆ ದೃಷ್ಟಿಯಿಂದ ಮಸೂದೆಯಲ್ಲಿ ಬಹಳಷ್ಟು ಗೊಂದಲವಿದೆ, ಇದನ್ನು ಪ್ರಾಕ್ಟಿಕಲ್ಲಾಗಿ ಮಾಡಲು ಸಾಧ್ಯವಿಲ್ಲ, ಮಾಡಿದರೆ ಹರಾಸ್ಮೆಂಟ್ ಮಾತ್ರ ಆಗುತ್ತದೆ ಸಾಧಾರಣ ಜನರಿಗೆ. ಆ ದೃಷ್ಟಿಯಿಂದ ಪುನಃ ಸೀರಿಯಸ್ಸಾಗಿ ವಿಚಾರ ಮಾಡಿ ಈ ಬಿಲ್ ತರಬೇಕು ಅಂತ ನನ್ನ ರಿಕ್ವೆಸ್ಟ್

ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೇ, ಈ ಬಿಲ್ ಪಾಸಾಗಬೇಕು ಅಂತ ಹೇಳೋರಲ್ಲಿ ನಾನೂ ಒಬ್ಬ. ಅಗತ್ಯವಿದೆ. ಆದರೆ ಸ್ವಲ್ಪ ಗಡಿಬಿಡಿಯಲ್ಲಿ ತಂದಿದ್ದಾರೆ, ಪ್ರಕಾಶರು ಹೇಳಿದಂತೆ ಇನ್ನೊಂದು ಬಿಲ್ ಇದೆ, ಅದರಲ್ಲಿ ಸ್ವಲ್ಪ ವಿವರಣೆ ಸಿಗುತ್ತದೆ. ಆದರೆ ಯಾವುದೇ ಬಿಲ್ ತರುವಾಗ 1987 Land Prohibition Act ಅಂತ ಒಂದಿದೆ, clause by clause explanation ಕೊಡಲಾಗಿದೆ. ಆ ತರಹ ಎಲ್ಲ ಬಿಲ್ ಗಳಿಗೂ ಕೊಟ್ಟರೆ ಈ ತರಹ ಚರ್ಚೆಯಾಗುವ ಅವಶ್ಯಕತೆ ಇರುವುದಿಲ್ಲ. ದಯವಿಟ್ಟು Rules of Proceedure ನಲ್ಲಿರುವಂತೆ ತಂದರೆ ಸದಸ್ಯರಿಗೆ ಸಹಾಯವಾಗುತ್ತದೆ. ನೀವೊಂದು ಕೆಲಸ ಮಾಡಬೇಕು. ಕೃಷಿ ಭೂಮಿಯನ್ನು ಇದರಿಂದ ಬಿಟ್ಟುಬಿಡಿ. ಆಗ ನಿಮ್ಮ major problem

solve ಆಗಿಹೋಯಿತು. ರೈತರನ್ನು ತೆಗೆದುಕೊಂಡು ಹೋಗಿ ಒಳಗೆ ಹಾಕುವುದಕ್ಕೆ ಆಗುವುದಿಲ್ಲ. ಮತ್ತೆ ಮೊದಲ ಪ್ಯಾರಾದಲ್ಲೆ ಏನು ಹೇಳಿದ್ದೀರಿ "ಪರಂತು, ಕೊಡಗು ಜಿಲ್ಲೆಯಲ್ಲಿರುವ ಜುಮ್ಮ, ಬಾಣೆ ಭೂಮಿಗಳ ಪ್ರಕರಣಗಳಿಗೆ ಅಥವಾ ಸಕ್ರಮಗೊಳಿಸಲಾದ ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳ ಅಥವಾ ಅಧಿನಿಯಮದ 94 ಎ, 94 ಬಿ ಮತ್ತು 94 ಸಿ ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ" ಸಮಿತಿಯಲ್ಲಿ ತೀರ್ಮಾನವಾಗಿ ಕೆಲವು ಅಪೀಲುಗಳು ಪೆಂಡಿಂಗ್‌ನಲ್ಲಿರುತ್ತವೆ. ಯಾವುದೇ ಪ್ರಾಧಿಕಾರದ ಮುಂದೆ ಪೆಂಡಿಂಗ್ ಇರುವಂಥದ್ದು ನೀವು ಇದರಲ್ಲಿ ತೆಗೆದುಕೊಳ್ಳಬಾರದು. Until final disposal or reject ಆಗಿ ಅವರ ಸ್ವಾಧೀನ ಇರುತ್ತೆ, ಕೃಷಿ ಭೂಮಿಯನ್ನು ತೆಗೆದುಕೊಳ್ಳಬಾರದು ಎಂದು ನಾನು ಹೇಳುತ್ತೇನೆ. ಮತ್ತೆ ಯಾವುದೇ ಕಾರಣದಿಂದ ಸರ್ಕಾರಕ್ಕೆ ಅರ್ಜಿಯನ್ನು ಹಾಕಿ ಹಿಂದೆ ಅವರ ಸ್ವಾಧೀನ ಇದ್ದು regularization ಗೆ ಯಾವುದೇ ಸಂಸ್ಥೆಗಳು ಹಾಕಿರುತ್ತಾರೆ, ಶಾಲೆ ಯಾವುದೋ ಒಂದು ಜಾಗ ಲೀಸ್‌ನಲ್ಲಿ ಅವರ ಸ್ವಾಧೀನದಲ್ಲಿರುತ್ತದೆ lease period expiry ಆಗಿರುತ್ತದೆ, Lease Period expire ಆದ್ದರಿಂದ ಪುನಃ renewal ಗೆ ಹಾಕಿರುತ್ತಾರೆ, It will be pending before the Government. ಏಕೆಂದರೆ ನಮ್ಮಲ್ಲಿ ಅನೇಕ ಅಧಿಕಾರಿಗಳು ಏನಿದ್ದಾರೆ, ಅವರು champions ಆಗಿಬಿಡುತ್ತಾರೆ. Champions ಎಂದರೆ ನನಗೆ ಅಧಿಕಾರ ಇದೆ ಎಂದು ಹೇಳಿ ತಕ್ಷಣವೇ ಆಗಿ ಜಾರಿಗೆ ತರುವುದೊಂದೇ ಅವರಿಗೆ ಗೊತ್ತಿರುವುದು ಬಿಟ್ಟರೆ ಜನರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅದಕ್ಕೋಸ್ಕರ ಕಾನೂನನ್ನು ವಿರೋಧವಂತೂ ನಾನು ಮಾಡುವುದಿಲ್ಲ. ಇದ್ದುದರಲ್ಲೇ ಸ್ವಲ್ಪ ಸರಿಪಡಿಸಬೇಕು. ಏಕೆಂದರೆ ನಮ್ಮ ಹತ್ತಿರ avalability list ಇರುತ್ತದೆ. Revenuel land ದು ಸರ್ಕಾರದಲ್ಲಿ availability list ಇರುತ್ತದೆ. ಯಾವುದು encroach ಆಗಿದೆ, ಏಕೆ encroach ಮಾಡಲು ಬಿಟ್ಟರು, ಯಾವ ಅಧಿಕಾರಿ ಅದನ್ನು ಬಿಟ್ಟರು, ಅದರ ಬಗ್ಗೆ ಸಹ ಯೋಚನೆ ಮಾಡಬೇಕಲ್ಲವೇ. ಇಷ್ಟು ವರ್ಷಗಳ ಕಾಲ ಸುಮ್ಮನೆ ಜನರು encroach ಮಾಡಲಿಲ್ಲ. ಅದಕ್ಕೆ ಬೆಂಬಲ ಅಧಿಕಾರಿ ವರ್ಗದಿಂದಲೂ ಇತ್ತು. ಅದನ್ನು ನಾವು ನೋಡಬೇಕೆಂದು ಮತ್ತೆ ಕುಮ್ಕಿ ಭೂಮಿ ಇದರಲ್ಲಿ ಸೇರಿಸಬಾರದು. For better cultivation of agriculture land, ಲ್ಯಾಂಡೇ ಇಲ್ಲದಂತೆ ಕಾಣುತ್ತದೆ, ಕಾಣೆ, ಬಾಣೆ ಇದ್ದಹಾಗೆ. ನಮ್ಮ ಜಿಲ್ಲೆಯಲ್ಲಿ ಕುಮ್ಕಿ ಭೂಮಿ, ಅದು

ಕೃಷಿ ಭೂಮಿ ಪಕ್ಕದಲ್ಲಿ ಇರುತ್ತದೆ. ಆಮೇಲೆ ಇನ್ನೊಂದು ನನಗೆ ಬೇಕಾಗಿರುವುದು ಎಂದರೆ ತಾವು ಅನೇಕ ಮಂದಿ encroachers ಬಗ್ಗೆ ಕಾನೂನು ಕ್ರಮ ತೆಗೆದುಕೊಂಡಿದ್ದೇವೆ, ಅವರ ಬಗ್ಗೆ FIR file ಮಾಡಿದ್ದೇವೆಂದು ಹೇಳಿದ್ದೀರಲ್ಲ. ಆ ಮಹಾನುಭಾವರ ಹೆಸರುಗಳ ಪಟ್ಟಿಯೊಂದನ್ನು ಕೊಡುತ್ತೀರಾ? ಅದು ಈ ಸದನಕ್ಕೆ ಗೊತ್ತಾಗಬೇಕು. ಎಷ್ಟು ಜನರು encroach ಮಾಡಿದ್ದಾರೆ, ಅವರ ಹೆಸರುಗಳ ಪಟ್ಟಿಯೊಂದನ್ನು ಈ ಸದನಕ್ಕೆ ಕೊಡಬೇಕಾಗುತ್ತದೆ. ಇದರಲ್ಲಿ ರಾಜಕಾರಣಿಗಳಿದ್ದಾರೆನ್ನುತ್ತಾರೆ. ಇಲ್ಲಿ ಅವರ ಹೆಸರು ಇದ್ದರೆ ಅದೂ ಹೊರಗೆ ಬರಲಿ. ರಾಜಕಾರಣಿಗಳಿದ್ದರೂ ಬರಲಿ, ಅಧಿಕಾರಿಗಳಿದ್ದರೂ ಬರಲಿ. ಅವರ ಹೆಸರುಗಳಿರುವ ಒಂದು ಪಟ್ಟಿಯನ್ನು ಈ ಸದನದ ಮುಂದೆ ನಾಳೆ ಇನ್ನೊಂದು ಬಿಲ್‌ನ್ನು ತರುವಾಗ ಇಟ್ಟರೆ ಸ್ವಲ್ಪ ಜನರಿಗೂ ಗೊತ್ತಾಗಲಿ. ಏಕೆಂದರೆ ಎಲ್ಲರ ಮೇಲೂ ಅಪವಾದ ಬೇಡ. ಯಾರ್‍ಯಾರು ಇದ್ದಾರೆ, ಅವರ ಮೇಲೆ ಮಾತ್ರ ಆಪಾದನೆ ಇರಲಿ. ಸುಮ್ಮನೆ ನಾವು ಅವರ ಜೊತೆಯಲ್ಲಿ ಕುಳಿತುಕೊಂಡಿದ್ದೇವೆಂದು ನಮ್ಮ ಮೇಲೆ ಆಪಾದನೆ ಮಾಡುವಂಥ ಪ್ರಯತ್ನವನ್ನು ಮಾಡಬೇಡಿ ಎಂದು ಹೇಳುತ್ತಾ ಪುನಃ ನಾನು ಇದಕ್ಕೆ ಬೆಂಬಲವನ್ನು ಸೂಚಿಸುತ್ತೇನೆ ಸ್ವಲ್ಪ clarification ಅನ್ನು ಕೇಳಿದ್ದೇನೆ. ಅದನ್ನು ಕೊಡಬೇಕೆಂದು ತಮ್ಮಲ್ಲಿ ನಾನು ತಮ್ಮ ಮುಖಾಂತರ ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೇ, ಇದು ಸುಗ್ರೀವಾಜ್ಞೆ ಈಗಾಗಲೇ ಇದೆ, ಕಾನೂನಾಗಿದೆ. ಈಗ ನಾವೇನು ಹೊಸದಾಗಿ ಕಾನೂನನ್ನು ಮಾಡತಕ್ಕ ಪ್ರಶ್ನೆ ಇಲ್ಲ. ಕೆಲವು ಬದಲಾವಣೆಗಳ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯುತ್ತಿದೆ. ಇದಕ್ಕೆ ಪ್ರೇರಕ ಶಕ್ತಿ ರಾಮಸ್ವಾಮಿಯವರ ಸಮಿತಿ. ತಾವು ಅದನ್ನು ಅರ್ಥ ಮಾಡಿಕೊಳ್ಳಬೇಕು. ಅದು ನಮ್ಮ ಸಮಿತಿಯೇ. ಅದರಲ್ಲೇನು ಬೇರೆ ಮಾತೇ ಇಲ್ಲ. ಸ್ವಲ್ಪ ಸೀಮಿತ ಮಾಡಿ ಬೆಂಗಳೂರು ಸೇರಿದಂತೆ ಪಟ್ಟಣ ಪ್ರದೇಶಗಳು ಎಂದು ಮಾಡಬೇಕಾಗಿತ್ತು, ಇದು ಒಂದು. ಈಗ ರಾಮಸ್ವಾಮಿ ಸಮಿತಿ ಕೊಟ್ಟಿರುವ ವರದಿಯೇನು ಇದೆ, ನಾನು ಸಮಿತಿಯ ಸದಸ್ಯನಾಗಿ ಮಾತನಾಡುತ್ತಿಲ್ಲ. ಆದರೆ ಅದು ಒಂದು ಕ್ರಾಂತಿಕಾರಕವಾದ ವರದಿ. ಆ ವರದಿಯನ್ನು ನಾವು ಮೆಚ್ಚಬೇಕು, ಸಂತೋಷಪಡಬೇಕು. ನಮಗೂ ನಮ್ಮ ಕಣ್ಣಿಗೆ ಬಿದ್ದಿರುವುದು. ಬಹಳ ನಾವೆಲ್ಲರೂ ಸೇರಿ ನೋಡಿದಾಗ ಸ್ವಲ್ಪ ಹೆಚ್ಚು ಕಡಿಮೆ ನಮ್ಮ ಗಮನಕ್ಕೆ ಬಂದಿರುವುದು 18 ಸಾವಿರ ಎಕರೆ ಬರೀ ಬೆಂಗಳೂರು ಸುತ್ತಮುತ್ತ. ಎಲ್ಲಾ ಭಾಗಕ್ಕೂ ಕೊಟ್ಟಿಲ್ಲ.

ನಿಮಗೆ ನಾನು ಹೇಳುತ್ತೇನೆ, ರಾಮನಗರ, ಚನ್ನಪಟ್ಟಣ ಸುತ್ತಮುತ್ತ ಕೊಟ್ಟಿಲ್ಲ. ನೆಲಮಂಗಲ ಕೊಟ್ಟಿಲ್ಲ. ಹೊಸಕೋಟೆ, ಮಾಗಡಿ ಕೂಡ ಇಲ್ಲ. ಈ ತರಹ ನಮಗೆ ಸಂಪೂರ್ಣವಾಗಿ ಬೆಂಗಳೂರು, ಬೆಂಗಳೂರು ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಷ್ಟನ್ನೂ ಕೊಟ್ಟಿದ್ದರೆ 50 ಸಾವಿರ ಎಕರೆ ಮೇಲೆ ನಮ್ಮ ಕಣ್ಣಿಗೆ ಕಾಣುತ್ತಿತ್ತು. ಕಮಿಟಿಯಲ್ಲಿ ಕೊಟ್ಟಿರುವುದು ಅಷ್ಟು. ನಮಗೆ ಅದರ ಬಗ್ಗೆ ಷರತ್ತಿನಲ್ಲಿ ಇಲ್ಲ. Terms ಇಲ್ಲ. ನಾವು ಕೇಳಿಕೊಂಡೆವು, ಎಲ್ಲಿಯವರೆಗೂ ಕೇಳಿಕೊಂಡೆವು ಎಂದರೆ ಬರೀ ಬೆಂಗಳೂರು, ಬೆಂಗಳೂರು ಜಿಲ್ಲೆ, ಗ್ರಾಮಾಮತರ ಜಿಲ್ಲೆ, ರಾಜ್ಯದ ಬಗ್ಗೆಯೂ ಕೊಡಿ ಎಂದು ನಾನು ಕೇಳಿದೆವು. ಈಗಲೂ ಕೊಡಿ ಎಂದು. ಪಟ್ಟಣ ಪ್ರದೇಶಗಳು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಮೈಸೂರು, ಬೆಳಗಾಂ, ಗುಲ್ಬರ್ಗಾ ಎಲ್ಲ ಬರಲಿ. ಈ ರೀತಿ ಪಟ್ಟಣ ಪ್ರದೇಶಗಳು ಈ ಎಲ್ಲವನ್ನೂ ಇದಕ್ಕೆ ಸೇರಿಸಿದ್ದರೆ ಇನ್ನೂ ಭಾರಿ ಬರುತ್ತಿತ್ತು. ಒಂದು ಮತ್ತು ಇಲ್ಲಿ ಚರ್ಚೆಯ ವಸ್ತುವಾಗಿ ಸದನದ ಮುಂದೆ ಆ ಒಂದು ವರದಿ ಚರ್ಚಾ ವಸ್ತುವಾಗಿದೆ. ನಿಜಕ್ಕೂ ಅದರ ಬಗ್ಗೆ ಯಾರ್‍ಯಾರು ಯಾವ ಯಾವ ಕುಳಗಳಿದ್ದಾರೆಂದು ಗೊತ್ತಾಗುತ್ತದೆ. ಅದರ ಬಗ್ಗೆ ತಮಗೂ ಗೊತ್ತಿದೆ. ನಿಜವಾಗಿ ಅದರ ಬಗ್ಗೆ ಲೆಕ್ಕವನ್ನು ಹಾಕಿದರೆ ಇದರ ಹಿಂದೆ ಯಾವ ಯಾವ ದರೋಡೆಕೋರರು ಇದ್ದಾರೆ ಎಂದು ಗೊತ್ತಾಗುತ್ತದೆ. ಇದು ಹಗಲುದರೋಡೆ. ದರೋಡೆ ಮಾಡುವುದು ಸಾಮಾನ್ಯವಾಗಿ ರಾತ್ರಿ. ಇದು ಹಗಲುದರೋಡೆ. ಅದರ ಬಗ್ಗೆ ಮಾತೇನು ಇಲ್ಲ. ಕೋಟಿ ಕೋಟಿ ಇದು. ಸ್ವಲ್ಪ ಏನೂ ಇಲ್ಲ. ಈ ಆಧಾರದ ಮೇಲೆ ಜಮೀನನ್ನು ಮಾರಿ ನಾವು ಸಾಲ ತೀರಿಸುತ್ತೇವೆಂದು ಹೇಳುತ್ತಿರುವುದು. ರಾಮಸ್ವಾಮಿ ಸಮಿತಿಯಲ್ಲಿ ನಾನೇ ಸದಸ್ಯನಾಗಿ ಅದನ್ನು ಅಭಿನಂದಿಸುತ್ತೇನೆ ಎನ್ನುವುದಕ್ಕಿಂತ ಹೆಚ್ಚಾಗಿ ನಮ್ಮ ಸಮಿತಿ ಚೆನ್ನಾಗಿ ಕೆಲಸ ಮಾಡಿದೆ. ಆ ವಿಚಾರ ಬೇರೆ. ತಾವು ಭಾಷಣವನ್ನು ಮಾಡುವಾಗ ಹೇಳಿದಿರಿ. ನಾನು ನಿಮ್ಮನ್ನು ಮೆಚ್ಚಿದೆ. ಇದು ಕಂದಾಯ ಇಲಾಖೆ ಮಾತ್ರವಲ್ಲ. ಮಿಕ್ಕ ಇಲಾಖೆಗಳು ಬಹಳ ಇವೆ. ಅದರಲ್ಲಿ ಬೆಂಗಳೂರಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮಹಾನಗರ ಪಾಲಿಕೆ, ಇವು ಪಾಪ ಕೂಪಗಳಿವು. ಇವೆರಡೂ ಕರ್ಮಕಾಂಡಗಳು. ಈ ರಾಜ್ಯದ ಕರ್ಮಕಾಂಡಗಳು. ಬೆಂಗಳೂರು ನಗರದಲ್ಲಿ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿರುವ ಲೂಟಿ ದರೋಡೆ ಆ ವರದಿಯಲ್ಲಿ ಅನೇಕರಿಗೆ ಗೊತ್ತಾಗಿದೆ. ನನಗನ್ನಿಸುತ್ತದೆ, ಇದರಲ್ಲಿ ಮಾಧುಸ್ವಾಮಿಯವರು ಹೇಳಿದ ರೀತಿ ಕೆಲವು ಸಾಮಾನ್ಯ ಬಡವರು ಕಟ್ಟಿರುವ ಮನೆಗಳು, ಸಾಮಾನ್ಯ ಕೃಷಿ ಭೂಮಿಗಳು,

ಇಂಥ ವಿಚಾರಗಳ ಬಗ್ಗೆ ಸ್ವಲ್ಪ ಪರಿಶೀಲನೆಯನ್ನು ನೀವು ಮಾಡಿ. ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಇದು ಇನ್ನೂ ಕ್ರಾಂತಿಕಾರಕವಾಗಿ ಆಗಬೇಕು. ಈ ಮಸೂದೆಯನ್ನು ಬೀಳಿಸಬೇಕೆಂದು ಕೆಲವರು, ಮಸೂದೆಯನ್ನು ಜಂಟಿ ಸಮಿತಿಗೆ ಕಳುಹಿಸಬೇಕೆನ್ನುವವರು ಕೆಲವರು ಬಹಳ ಚರ್ಚೆ ಇಲ್ಲಿ ನಡೆಯುತ್ತಿದೆ. ಬಹಳ ದೊಡ್ಡ ಸರ್ಕಸ್ ಇಲ್ಲಿ ನಡೆಯುತ್ತಿದೆ. ನಾನಂತೂ ಇದನ್ನು ನೇರವಾಗಿ ಸ್ವಾಗತಿಸುತ್ತೇವೆ. ಇದರಲ್ಲೇನು ಹಿಂದೆ ಮುಂದೆ ಇಲ್ಲ. ಭದ್ರವಾಗಿ ನೇರವಾಗಿ ಇದಕ್ಕೆ ನೀವು ಇನ್ನು ಕಟುವಾದ ಪದಗಳನ್ನು ಹಾಕುವುದಾದರೂ ನಾವು ಸ್ವಾಗತಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ನಿಮಗೆ ಹೇಳುವುದಿದ್ದರೆ ನೇರವಾಗಿ ಹೇಳಿ. ಈ ಸದನದಲ್ಲೇ ಇದ್ದಾರೆ, Joint Select Committee ಗೆ refer ಮಾಡಿ ಎಂದು ಹೇಳುತ್ತಾರೆ, ಅನ್ನತಕ್ಕಂಥದ್ದು aspersions cast ಮಾಡಿದರೆ We have to move a privilege motion against you. ಏನು ತಿಳಿದುಕೊಂಡಿದ್ದೀರಿ? ನೀವೊಬ್ಬರೇ ಬುದ್ಧಿವಂತರೆಂದು ತಿಳಿದುಕೊಂಡಿರೇನು? I don't like this. ನೀವು ಮಾಡುವುದಾದರೆ ನೇರವಾಗಿ ಮಾಡಿ. ಅನೇಕ ಸದಸ್ಯರು ಶಿವಮೊಗ್ಗದಿಂದ ಬಂದವರು, ರೂರಲ್‌ನಿಂದ ಬದವರು, ಹಳ್ಳಿಯಲ್ಲಿರತಕ್ಕವರು, ಅನೇಕ ಬಂಜಾರ ಸಮಾಜದವರು, Schedules Caste ಜನ landless people ಕೂಡ ಜಮೀನುಗಳನ್ನು ಹೊಡೆದಿದ್ದಾರೆ. ಆ ದಿಕ್ಕಿನಲ್ಲಿ ಅನೇಕ ಜನರು ಮಾತನಾಡಿದ್ದಾರೆ. ಅದನ್ನು ಬಿಟ್ಟು ನೀವು Joint Select Committee ಗೂ ಕಳುಹಿಸುವುದೂ ಬೇಡ, ಚಿಂತನೆಯನ್ನೂ ಮಾಡುವುದೂ ಬೇಡ, ನೇರವಾಗಿ ಕಳುಹಿಸಿ ಎಂದರೆ ಹೇಗೆ? ನಾನು ಒಬ್ಬರೇ ಹೇಳುವುದು ಸರಿ ಎಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾವು ಸ್ಪಷ್ಟವಾದ ನಿದರ್ಶನಗಳು ಅನೇಕ ಇವೆ. ಅದರ ಬಗ್ಗೆ ಮಾತನಾಡತಕ್ಕದ್ದು ಇಲ್ಲ. ಈಗ ಮಸೂದೆಯ್ನು ಯಾವುದೇ ಕಾರಣಕ್ಕೂ ಯಾವುದೇ ಒತ್ತಡಕ್ಕೂ ನೀವು ಹಿಂದಕ್ಕೆ ಪಡೆಯಕೂಡದು. ಸಂಪೂರ್ಣವಾಗಿ ಇದರ ಬಗ್ಗೆ ನಮ್ಮ ಬೆಂಬಲ ಇದೆ.

ಶ್ರೀ ವಿ. ಸೋಮಣ್ಣ :- ಕೃಷಿ ಭೂಮಿಯಲ್ಲಿ ಕಟ್ಟಿರುವ ಮನೆಗಳನ್ನು ಒಡೆದು ಹಾಕಿ ಎನ್ನುತ್ತೀರಾ?